# ಹಂಪಿ ಟೈಮ್ಸ್
HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 278 Issue: 278 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 13.05.2025 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



1,30,000+
Digital E-PAPER READERS
To book Classified Display Ad in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper



ಹಂಪಿ ಟೈಮ್ಸ್
SCAN TO WATCH
SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


## ನಿನಗೆ ನೀನೇ ಬೆಳಕು

ಕಲಿಯಲು ತಿರಸ್ಕರಿಸುವುದು
ಜೀವಿಸಲು ತಿರಸ್ಕರಿಸುವುದಕ್ಕೆ
ಸಮವಾದುದು
– ರಾಮಕೃಷ್ಣ ಪರಮಹಂಸ

## ದೇವಾಲಯ ದರ್ಶನ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

# ಪ್ರತಿ ಮನೆ ಮನಗಳಲ್ಲಿ ಪ್ರತಿಮೆಗಿಂತ ಶಾಂತಿ ಸೌಹಾರ್ದ ಅಹಿಂಸೆ ನೆಲೆಸಲಿ

## ಭಗವಾನ್ ಬುದ್ಧ ಜಯಂತಿಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ



■ ಹಂಪಿ ಟೈಮ್ಸ್ ಹೊಸಪೇಟೆ

ಬಹುತೇಕರ ಮನೆಗಳಲ್ಲಿ ಬುದ್ಧನ ಪ್ರತಿಮೆಗಳನ್ನು ಇರಿಸಲಾಗಿದೆ. ಆದರೆ ಅಶಾಂತಿ ಮತ್ತು ಹಿಂಸಾತ್ಮಕ ವಾತಾವರಣಗಳೇ ಹೆಚ್ಚಾಗಿರುವ ಪ್ರಸ್ತುತ ಕಾಲಘಟ್ಟದಲ್ಲಿ ಮನೆ, ಮನಗಳಲ್ಲಿ ಶಾಂತಿ, ಅಹಿಂಸೆ ನೆಲೆಸಬೇಕಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣ ದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾ ಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಭಗವಾನ್ ಬುದ್ಧ ಜಯಂತಿಯಲ್ಲಿ ಬುದ್ಧನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಸೋಮವಾರ ಮಾತನಾಡಿದರು. ವಿಶ್ವ ಶಾಂತಿಯನ್ನು ಬಯಸಿದ್ದ ಗೌತಮ ಬುದ್ಧರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕಾದ ಸಕಾಲಿಕ ಅನಿವಾರ್ಯತೆ ಇದೆ. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಹಿಂಸಾತ್ಮಕ ಶೋಷಣೆ ಗಳು, ಕೊಲೆ ಸುಲಿಗೆ, ರಕ್ತಪಾತ, ಕ್ರೌರ್ಯದ ಮಾನಸಿಕತೆಯನ್ನು ತೊಲಗಿಸಿ, ಸರ್ವರೂ ಶಾಂತಿಯ ಬೆಳಕಿನಡಿಯಲ್ಲಿ ಬದುಕಲು ಬುದ್ಧನ ಮೌಲ್ಯಯುತ ಸಂದೇಶಗಳನ್ನು ಎಣ್ಣೆಯಂತೆ ಬಳಸಿಕೊಂಡು ಬದುಕು ಬೆಳಗಿಸುವತ್ತ ಸಾಗಬೇಕಿದೆ. ಮನುಷ್ಯ ಬದುಕಿನ ಘನತೆಗೆ ಬುದ್ಧನ ಅಷ್ಟಾಂಗ ಮಾರ್ಗಗಳನ್ನು ಅನುಸರಿಸಬೇಕಿದೆ. ಬುದ್ಧನ ಆಶಯ ದುಖಃದಿಂದ ಮನುಷ್ಯನನ್ನು ದೂರ ಮಾಡುವುದಾಗಿದೆ. ಧ್ಯಾನದಿಂದ ದುಃಖ ಮತ್ತು ಪಾಪಕರ್ಮಗಳು ಮುಕ್ತವಾಗಲು ಸಹಕಾರಿಯಾಗಲಿದೆ ಎಂದರು.

ಇದೇ ವೇಳೆ ವಿಜಯನಗರ-ಹಂಪಿ ಬುದ್ಧ ವಿಹಾರ ನಿರ್ಮಾಣ ಟ್ರಸ್ಟ್ ಪದಾಧಿಕಾರಿಗಳು ನಗರದ ಶ್ರೀಗುರು ಪಿಯು ಕಾಲೇಜಿನ ಬಳಿಯಿರುವ ವೃತ್ತವನ್ನು ಸಿದ್ದಾರ್ಥ ಗೌತಮ ಬುದ್ಧ ವೃತ್ತ ಎಂದು ನಾಮಕರಣಗೊಳಿಸಿ, ವೃತ್ತದ ಅಭಿವೃದ್ಧಿಗೆ ಹೈಮಾಸ್ಟ್ ವಿದ್ಯುತ್‌ದೀಪದ ವ್ಯವಸ್ಥೆ ಕಲ್ಪಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಜಯಂತಿ ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ, ಸಾಹಿತಿ ಬಿ.ಪೀರ್ ಬಾಷಾರವರು ಭಗವಾನ್ ಬುದ್ಧನ ಕುರಿತು ವಿಶೇಷ ಉಪನ್ಯಾಸ ನೀಡಿದರು. ಈ ವೇಳೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣವರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ, ದಲಿತ ಪರ ಸಮಾಜ ಮುಖಂಡ ಎಂ.ಜಂಬಯ್ಯ ನಾಯ್ಕ್, ಕನ್ನಡ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಚಿನ್ನಸ್ವಾಮಿ ಸೋಸಲೆ, ರಾಜ್ಯೋತ್ಸವ ಪುರಸ್ಕೃತ ಜೆ.ಎಂ.ವೀರಸಂಗಯ್ಯ, ವಿವಿಧ ಸಮಾಜದ ಮುಖಂಡರು, ಅಧಿಕಾರಿಗಳು ಭಾಗವಹಿಸಿದ್ದರು.






ಹೊಸಪೇಟೆಯ ಮೇನ್ ಬಜಾರಿನಲ್ಲಿ ಶ್ರೀ ವಡಕರಾಯಸ್ವಾಮಿ ಮತ್ತು ಶ್ರೀ ರಂಗನಾಥಸ್ವಾಮಿಯ ರಥೋತ್ಸವ ಸೋಮವಾರ ಸಂಜೆ ವಿಜೃಂಭಣೆ ಯಿಂದ ನಡೆಯಿತು. ಅಧಿಕಾರಿಗಳ, ಜನಪ್ರತಿನಿದಿಗಳು, ಭಕ್ತರು ಪಾಲ್ಗೊಂಡು ಭಕ್ತಿ ಸಮರ್ಪಿಸಿದರು.

# ಮೇ.13 ಕಮಲಾಪುರ ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಹೊಸಪೇಟೆ

ಕಮಲಾಪುರ 110/11 ಕೆವಿ ಕಮಲಾಪುರ ವಿದ್ಯುತ್ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಮೇ.13 ರಂದು ಮಂಗಳವಾರ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆವರೆಗೆ ಕಮಲಾಪುರ ಶಾಖಾ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ ಗ್ರಾಪಂ, ಸೀತರಾಮ ತಾಂಡ ಗ್ರಾಪಂ, ಮಲಪನಗುಡಿ ಗ್ರಾಪಂ, ಹಂಪಿ ಗ್ರಾಪಂ, ಪಾಪಿನಾಯಕನಹಳ್ಳಿ ಗ್ರಾಪಂ, ಗಾದಿಗನೂರು ಗ್ರಾಪಂ ಮತ್ತು ಬೈಲುವದ್ದಿಗೇರಿ ಗ್ರಾಪಂ ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪ್ ಸೆಟ್ ರೈತರಿಗೆ ವಿದ್ಯುತ್ ಆಡಚಣೆ ಆಗಲಿದೆ. ರೈತರು, ಗ್ರಾಹಕರು ಸಹಕರಿಸಬೇಕೆಂದು ಹೊಸಪೇಟೆ ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದಯಾನಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಗರಸಭೆ ಪರಿಷ್ಕೃತ ಶುಲ್ಕ ನಿಗಧಿ : ಆಕ್ಷೇಪಣೆಗೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ನಗರದ ನಗರಸಭೆ ಹೊಸಪೇಟೆ ವ್ಯಾಪ್ತಿಯಲ್ಲಿ ಬರುವ ಉದ್ದಿಮೆ ಪರವಾನಿಗೆಯ ಶುಲ್ಕ ಸೇರಿದಂತೆ 2025-26ನೇ ಸಾಲಿನಿಂದ ಜಾರಿಗೆ ಬರುವಂತೆ ಧರಗಳನ್ನು ನಿಗದಿಪಡಿಸಿ ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕಾರ ಧರಗಳನ್ನು ಪರಿಷ್ಕೃತಗೊಳಿಸಿರುತ್ತದೆ. ಸಾರ್ವಜನಿಕರು ತಮ್ಮ ಆಕ್ಷೇಪಣೆಗಳು ಸಲಹೆಗಳಿದ್ದಲ್ಲಿ ಮೇ.21 ರೊಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಸಭೆಗೆ ಸಲ್ಲಿಸುವುದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಗರಸಭೆ ಕಾರ್ಯಾಲಯ ಆರೋಗ್ಯ ಶಾಖೆಯನ್ನು ಸಂಪರ್ಕಿಸಿ ಪಡೆಯತಕ್ಕದ್ದು ಹಾಗೂ ಪರಿಷ್ಕೃತ ದರಪಟ್ಟಿಯನ್ನು ಕಾರ್ಯಾಲಯದ ಸೂಚನಾ ಫಲಕದಲ್ಲಿ ಲಗತ್ತಿಸಿದೆ ಎಂದು ನಗರಸಭೆ ಪೌರಯುಕ್ತರಾದ ಚಂದ್ರಪ್ಪರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಪಿಎಸ್ಐ ನೇಮಕಾತಿ ಪರೀಕ್ಷಾ ಪೂರ್ವ ತರಬೇತಿಗೆ ಅನ್‌ಲೈನ್ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

2024-25ನೇ ಸಾಲಿಗೆ ಮಂಜೂರಾದ ರಾಜ್ಯದ ಬೆಳಗಾವಿ, ಮೈಸೂರು ಕಂದಾಯ ವಿಭಾಗ ಗಳಲ್ಲಿ ಅಲ್ಪಸಂಖ್ಯಾತರ ಸಮು ದಾಯದ ಯುವಜನರಿಗೆ 90 ದಿನಗಳ ವಸತಿ ಯುತ ಪೊಲೀಸ್ ಸಬ್ ಇನ್ಸ್ ಪೆಕ್ಟರ್ (ಪಿಎಸ್ಐ) ನೇಮಕಾತಿ ಪರೀಕ್ಷಾ ಪೂರ್ವ ತರಬೇತಿಯನ್ನು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಪ್ರತಿಷ್ಠಿತ ಸಂಸ್ಥೆಯ ಮೂಲಕ ನೀಡಲು ಸೇವಾಸಿಂಧು ಪೋರ್ಟಲ್ ಮುಖಾಂತರ ಆನ್ ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿ ಸಲಾಗಿದೆ. ಜಿಲ್ಲೆಯ ಆಸಕ್ತ ಅಲ್ಪ ಸಂಖ್ಯಾತರ ಸಮುದಾಯದ ಅಭ್ಯರ್ಥಿ ಗಳು ಸೇವಾ ಸಿಂಧು ಪೋರ್ಟಲ್ https://sevasindhu.karnataka.gov.in ಮೂಲಕ ಅರ್ಜಿಗಳನ್ನು ಮೇ.23 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ https://dom.karnataka.gov.in ವೀಕ್ಷಿಸಿ ಎಂದು ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!



Classifide / Display ADS
Contact:
94486 33038





ಹಗರಿಬೊಮ್ಮನಹಳ್ಳಿ ಪುರಸಭೆ ಕಾರ್ಯಾಲಯದಲ್ಲಿ ಭಗವಾನ್ ಬುದ್ಧ ಜಯಂತಿಯನ್ನು ಸೋಮವಾರ ಆಚರಿಸಲಾಯಿತು. ಪುರಸಭೆ ಅಧ್ಯಕ್ಷ ಮರಿ ರಾಮಪ್ಪ, ಉಪಾಧ್ಯಕ್ಷರು, ಸದಸ್ಯರು, ಮುಖ್ಯಾಧಿಕಾರಿ ಪ್ರಭಾಕರ ಎಂ ಪಾಟೀಲ, ಹಾಗೂ ಸಿಬ್ಬಂದಿ ಇದ್ದರು.

# ಬಿಡಿಸಿಸಿ ಬ್ಯಾಂಕ್ ಶಾಖೆ ಸ್ಥಳಾಂತರ ವಿರೋಧಿಸಿ ಪ್ರತಿಭಟನೆ

■ ಹಂಪಿ ಟೈಮ್ಸ್ ಕೂಡ್ಲಿಗಿ



ತಾಲ್ಲೂಕಿನ ಚಿಕ್ಕ ಜೋಗಿಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿರುವ ಬಿಡಿಸಿಸಿ ಬ್ಯಾಂಕ್ ಸ್ಥಳಾಂತರ ವಿರೋಧಿಸಿ ಸೋಮವಾರ ರೈತರು ಪ್ರತಿಭಟಿಸಿ ಮನವಿ ಸಲ್ಲಿಸಿದರು.


ನೂತನವಾಗಿ ಆಯ್ಕೆಯಾಗಿರುವ ನಿರ್ದೇ ಶಕರು ಶೇರುದಾರರ ರೈತರ ಗಮನಕ್ಕೆ ಬಾರದೇ ಬಿ.ಡಿ.ಸಿ.ಸಿ, ಬ್ಯಾಂಕನ್ನು ಸ್ಥಳಾಂತರಿಸುವುದು ಅಪರಾಧ. ಈ ಹಿಂದೆ ಹೊಸದಾಗಿ ನಿರ್ಮಿಸುವಾಗ ಪ್ರತಿ ಸಾಲ ಮಂಜೂರಾದ ರೈತರಿಂದ 2000 ರೂ ಪಡೆದು ಹೊಸ ಬ್ಯಾಂಕನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ 2019 ರಲ್ಲಿ ಬ್ಯಾಂಕ್ ಶಾಖೆ ಸ್ಥಾಪಿಸಲಾಗಿದ್ದು ಎಲ್ಲಾ ಸೌಲಭ್ಯಗಳನ್ನು ಹೊಂದಿದೆ. ಬಿ.ಡಿ.ಸಿ.ಸಿ. ಬ್ಯಾಂಕ್ ಮತ್ತು ಪ್ರಾಕೃಪ.ಸ.ಸಂಘದಿಂದ 15 ವರ್ಷಗಳ ಅಗ್ರಿಮೆಂಟ್ ಒಡಂಬಡಿಕೆಯಾಗಿರುತ್ತದೆ. ಬ್ಯಾಂಕ್‌ನ್ನು ಯಾವುದೋ ಖಾಸಗಿ ಯವರ ಲಾಭಕ್ಕಾಗಿ, ಖಾಸಗಿ ಕಟ್ಟಡಕ್ಕೆ ಸ್ಥಳಾಂತರಿಸಲು ಹುನ್ನಾರ ನಡೆಯುತ್ತಿದ್ದು, ಆ ಖಾಸಗಿ ಕಟ್ಟಡದ ಹಿಂದೆ ಮರ ಕೊಯ್ಯುವ ದೊಡ್ಡ ಸಾಮೀಲ್ ಇದ್ದು, ಇದರಿಂದ ಬರುವ ಕರ್ಕಶವಾದ ಶಬ್ದ ಹಾಗೂ ಸಾಮೀಲ್‌ನಿಂದ ಬರುವ ಮರದ ಧೂಳು ಬ್ಯಾಂಕ್ ಸಿಬ್ಬಂದಿಗಳಿಗೆ ಹಾಗೂ ಗ್ರಾಹಕರಿಗೂ ಆರೋಗ್ಯದ ದೃಷ್ಟಿಯಿಂದ ತೊಂದರೆಯಾಗುತ್ತದೆ. ಈ ಸಮಸ್ಯೆ ಗಂಭೀರವಾಗಿ ಪರಿಶೀಲಿಸಿ ಸದರಿ ಬ್ಯಾಂಕ್‌ನ್ನು ಹಾಲಿ ಇರುವ ಪ್ರಾ.ಕೃ.ಪ.ಸ. ಸಂಘ ಆವರಣದಲ್ಲಿಯೇ ಉಳಿಸಿ ಬ್ಯಾಂಕಿಗೆ ಏನಾದರೂ ಹೆಚ್ಚಿನ ದಾಗಿ ವ್ಯವಸ್ಥೆಗಳು ಬೇಕಾಗಿದ್ದಲ್ಲಿ ಪ್ರಾಕೃಪಸ ಸಂಘದ ಸಹಾಯದಿಂದ ಸಹಕಾರ ಪಡೆದುಕೊಂಡು ಬ್ಯಾಂಕನ್ನು ಅಭಿವೃದ್ಧಿ ಪಡಿಸಿಕೊಂಡು ಹಾಲಿ ಇರುವ ಜಾಗದಲ್ಲಿಯೇ ಉಳಿಸಬೇಕೆಂದು ರೈತರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಸಹಕಾರ ಸಂಘದ ಉಪಾಧ್ಯಕ್ಷೆ ಸುಮಂಗಳಮ್ಮ ಕೋದಂಡರಾಮಣ್ಣ, ತಾ.ಪಂ ಮಾಜಿ ಉಪಾಧ್ಯಕ್ಷ ಎಸ್.ಪಿ. ಪ್ರಕಾಶ್, ಗ್ರಾಮ ಪಂಚಾಯತಿ ಅಧ್ಯಕ್ಷ ಅಶೋಕ್ ನಾಯ್ಕ್, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಜೇಶ್ ನಾಯ್ಕ್, ಕುರಿಹಟ್ಟಿ ಓಬಣ್ಣ, ಬಾಬು ನಾಯ್ಕ್, ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಕಾರ್ಯದರ್ಶಿ ಎಚ್. ಡಿ. ಚಂದ್ರಪ್ಪ ಬಿ.ಟಿ ಗುದ್ದಿ, ರಮೇಶ್ ನಾಯ್ಕ, ಧನಂಜಯ್ ಗ್ರಾಮ ಪಂಚಾಯತಿ ಸದಸ್ಯರು ಮಾಡ್ಲಕ್ನನಳ್ಳಿ, ರೈತ ಮುಖಂಡರಾದ ಗುರುಲಿಂಗಣ್ಣ, ಸೋಮಶೇಖರ್ ನಾಯ್ಕ್ ಸೇರಿದಂತೆ ರೈತರು, ಗ್ರಾಹಕರು, ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಮಹಿಳಾ ಸ್ವಸಹಾಯ ಸಂಘಗಳು, ರೈತರು ಇತರರು ಇದ್ದರು.




# ಅಮ್ಮನೆಂಬ ದೈವ

**"ನವಮಾಸಗಳು ಉದರದಿ ಹೊತ್ತು**
**ಕಾಪಾಡುತ ಜತನದಿ ಜೀವದ ಸೊತ್ತು**
**ಜನ್ಮವ ನೀಡುವಳು ತಾಯಿ**
**ಜಗನ್ಮಾತೆ ಸ್ವರೂಪಿಣಿ ನಮ್ಮ ಕಾಯಿ"**



ಪ್ರತಿಯೊಂದು ಜೀವಿಯ ಮೊದಲ ನಗು, ಅಳು, ಮೊದಲ ತೊದಲ ಮಾತು ಅಮ್ಮ. ಪ್ರತಿಯೊಬ್ಬರ ಬದುಕಿಗೆ ಅರ್ಥ ಕೊಡುವ ದೇವತೆ ಅವಳು. ತನ್ನ ದುಃಖವನ್ನು ಎಂದೂ ತೋರಿಸಿಕೊಳ್ಳದೆ, ನಗು ನಗುತ್ತಾ, ಜೀವನದ ಉತ್ಸಾಹವನ್ನು ಹೆಚ್ಚಿಸುವ ಅಗಣಿತ ವಾತ್ಸಲ್ಯದ ಗಣಿ ಅಮ್ಮ. ಅಮ್ಮನ ಮಡಿಲು ಒಂದು ನಮೂನೆಯ ಭದ್ರತಾ ತಾಣ. ನಾವು ಎಷ್ಟು ದೊಡ್ಡವರಾದರೂ ದುಃಖದಲ್ಲಿದ್ದಾಗ ಒಂದು ಕ್ಷಣ ಅಮ್ಮನೊಡನೆ ಮಾತನಾಡಿದರೆ ಅಥವಾ ಅವಳ ಮಡಿಲಲ್ಲಿ ಮಗುವಾದರೆ ನೋವನ್ನು ಮರೆಯಬಹುದು. ಅಂತಹ ಅದ್ಭುತ ಶಕ್ತಿ ಅಮ್ಮನಲ್ಲಿದೆ. ತಾಯಿಯ ಪ್ರೀತಿಗೆ ಮಿತಿಯೇ ಇಲ್ಲ. ಬದುಕಲ್ಲಿ ಸಂಕಷ್ಟದ ಸಂದರ್ಭ ಎದುರಾದಾಗ ತಾಯಿ ನೀಡುವ ಧೈರ್ಯ ಭರವಸೆಯ ಮಾತುಗಳು, ಅವಳ ಪ್ರೀತಿ ಅಕ್ಕರೆ ನಮಗೆ ದೊಡ್ಡ ಶಕ್ತಿಯಾಗಿ ನಿಲ್ಲುತ್ತದೆ. ಆಕೆಯ ಮಮತೆಯ ನೆರಳೇ ಮಕ್ಕಳಿಗೆ ರಕ್ಷಾಕವಚವಾಗಿದೆ.

ಅಮ್ಮ ಎನ್ನುವ ಎರಡಕ್ಷರದ ಪದವನ್ನು ವರ್ಣಿಸಲು ಅಸಾಧ್ಯ. ನಮ್ಮ ನೋವನ್ನು ಮರೆಸಿ ಎಲ್ಲೆಡೆ ಸುಖ, ಶಾಂತಿ, ನೆಮ್ಮದಿಯನ್ನು ಹರಡುವ ಅನನ್ಯ ಶಕ್ತಿ ಈ ಎರಡಕ್ಷರಕ್ಕಿದೆ. ಪ್ರೀತಿ,ಅಕ್ಕರೆ ಮಮತೆಯ ಅಂತಃಕರಣಿ, ಸಹನಾಮೂರ್ತಿ ತ್ಯಾಗಮಯಿ, ತಾಳ್ಮೆಗೆ ಇನ್ನೊಂದು ಹೆಸರೇ ತಾಯಿ. "ದೇವರು ಎಲ್ಲಾ ಕಡೆ ಇರಲಾಗುವುದಿಲ್ಲ" ಅದಕ್ಕೆ ತಾಯಿಯನ್ನು ಸೃಷ್ಟಿಸಿದ್ದಾನೆ. ತಾಯಿಯೇ ನಿಜ ದೈವ, ಜೀವಂತ ದೇವತೆ ಎಂಬ ಮಾತು ಜನಜನಿತವಾಗಿದೆ.

ಅಪರಿಮಿತ ಮಮತೆಯ ಅಗಣಿತ ವಾತ್ಸಲ್ಯದ ಗಣಿಯಾದ ತಾಯಿಯನ್ನು ಬಣ್ಣಿಸಲು ಪದಪುಂಜಗಳೇ ಸಾಲದು. ತಾಯಿಯಾದವಳು ಮಕ್ಕಳಿಗೆ ಕೇವಲ ಜೀವವನ್ನು ನೀಡುವುದಿಲ್ಲ, ಅವರ ಜೀವನವನ್ನು ರೂಪಿಸುವಲ್ಲಿ ತನ್ನ ಜೀವ ಮತ್ತು ಜೀವನವನ್ನೇ ಸವೆಸಿರುತ್ತಾಳೆ. ತನ್ನ ಸಂಸಾರಕ್ಕಾಗಿ ಗಂಡ ಮಕ್ಕಳಿಗಾಗಿ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ನುಂಗಿಕೊಂಡ ತ್ಯಾಗಮೂರ್ತಿ ತಾಯಿ.

ಮನೆಯ ಒಳಗೂ ಹೊರಗೂ ದುಡಿದು ಮಕ್ಕಳ ಲಾಲನೆ ಪಾಲನೆ ಮಾಡಿ, ಅವರಿಗೆ ಒಳ್ಳೆಯ ಸಂಸ್ಕಾರ ನೀಡಿ, ಅವರ ಮೊಂಡುತನವನ್ನು ಸಹಿಸಿ, ತಪ್ಪು ಒಪ್ಪುಗಳನ್ನು ಅವರಿಗೆ ಮನದಟ್ಟು ಮಾಡಿಸಿ, ಅನೇಕ ಸವಾಲು ಅಗ್ನಿ ಪರೀಕ್ಷೆಗಳನ್ನು ಎದುರಿಸಿ ತನ್ನ ಅಸ್ತಿತ್ವವನ್ನೇ ಮರೆತು ತಾಯಿ ಮಕ್ಕಳಿಗಾಗಿ ಬದುಕುತ್ತಾಳೆ.

ಮಕ್ಕಳ ಮಾನಸಿಕ ಸ್ಥಿತಿ ಒತ್ತಡವನ್ನು ಅರ್ಥೈಸಿಕೊಂಡು ಮನೋಸ್ಥೈರ್ಯ ತುಂಬುವ ಮನೋವೈದ್ಯಯಾಗಿ, ಮಕ್ಕಳ ಭವಿಷ್ಯವನ್ನು ರೂಪಿಸುವ ಶಿಲ್ಪಿಯಾಗಿ, ಅವರ ಬದುಕಿಗೆ ಪ್ರೇರಣಾಶಕ್ತಿಯಾಗಿ, ಮಾರ್ಗದರ್ಶಕಿಯಾಗಿ, ಶಿಕ್ಷಕಿಯಾಗಿ ಹೀಗೆ ತಾಯಿ ಬಹು ಪಾತ್ರದಲ್ಲಿ ಕಾರ್ಯನಿರ್ವಹಿಸುತ್ತಾಳೆ. ತಾಯಿಯೇ ಮೊದಲ ಗುರು ಎಂಬಂತೆ ಮಕ್ಕಳ ಸರ್ವತೋಮುಖ ಏಳಿಗೆಗೆ ತಾಯಿಯು ಮಹತ್ತರವಾದ ಪಾತ್ರವನ್ನು ವಹಿಸುತ್ತಾಳೆ. ಜೀವವನ್ನು ನೀಡಿ, ಜೀವನವನ್ನು ಸವೆಸಿ, ಜೀವನವನ್ನು ರೂಪಿಸಿದ ಅಗಣಿತ ವಾತ್ಸಲ್ಯದ ಗಣಿಯಾದ ಜೀವದಾತೆಯನ್ನು ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ನನ್ನ ಅಜ್ಜ ಅಜ್ಜಿ ಹಾಗೂ ಅಜ್ಜನ ಅಮ್ಮನನ್ನು, ನನ್ನ ಅಮ್ಮ ನೋಡಿಕೊಂಡು ದಿನನಿತ್ಯದ ಕೆಲಸವನ್ನು ಮಾಡಿ, ಅತಿಥಿಗಳನ್ನು ಉಪಚರಿಸಿ, ಮಕ್ಕಳನ್ನು ಸಂಭಾಳಿಸಿದ ರೀತಿ ನಿಜವಾಗಿಯೂ ಶ್ಲಾಘನೀಯ. ಹಾಗೆಯೇ ನನ್ನ ಚೊಚ್ಚಲ ಬಾಣಂತನದ ವೇಳೆ, ನನ್ನ ತವರಿನಲ್ಲಿ ಅಡಿಕೆ ಕೊಯಿಲಿನ ಸಮಯ, ಅಮ್ಮನಿಗೆ ಅಡಿಕೆ ಸುಲಿಯಲು ಬರುವ ಕೆಲಸದವರಿಗೆಲ್ಲಾ ತಿಂಡಿ, ಪಾನೀಯಗಳನ್ನು ಒದಗಿಸಿ , ಎರಡೆರಡು ಕೊಟ್ಟಿಗೆಯ ಜಾನುವಾರುಗಳನ್ನು ಸಂಭಾಳಿಸುತ್ತಾ ಜೊತೆಗೆ ದೈನಂದಿನ ಮನೆಯ ಕೆಲಸ ಕಾರ್ಯಗಳ ಒತ್ತಡವಿದ್ದರೂ ನನ್ನ ಮಗಳ ಅಳುವ ಕರೆಗೆ ಓಗೊಟ್ಟು ರಾತ್ರಿಯೆಲ್ಲಾ ಅವಳನ್ನು ಅಂಗಾಲ ಮೇಲೆ ಮಲಗಿಸಿಕೊಂಡು ಸಮಾಧಾನಿಸುತ್ತಿದ್ದ ಪರಿ , ನನ್ನ ಅಮ್ಮನ ತಾಯ್ತನದ ತಾಳ್ಮೆ, ಅವಳ ಅಗಣಿತ ವಾತ್ಸಲ್ಯವನ್ನು ಕಂಡು ಅಚ್ಚರಿಪಟ್ಟಿದ್ದಿದೆ.

ಅದರಂತೆ ನನ್ನ ಎರಡನೇ ಮಗಳಿಗೆ ಮೊದಲ ಮಗಳು ಅಕ್ಕನಾಗಿ ,ತಾಯಿಯಂತೆ ಊಟ ತಿಂಡಿ ಮಾಡಿಸುವಾಗ, ಸ್ನಾನ ಮಾಡಿಸಿ, ತಲೆ ಬಾಚಿ , ಹಣೆಗಿಟ್ಟು ಶೃಂಗಾರ ಮಾಡಿ ಖುಷಿ ಪಡುವ , ಚಿಕ್ಕ ಮಗಳು ಅತ್ತಾಗ ದೊಡ್ಡವಳು ಸಮಾಧಾನ ಹೇಳುವ ಪರಿ ಕಂಡು ಹೆಣ್ಣಿಗೆ ತಾಯ್ತನ ಎಷ್ಟು ಸಹಜವಾಗಿಯೇ ಮೈಗೂಡುತ್ತದೆಯಲ್ಲವೇ ಎಂಬ ಅರಿವು ಆಗಿದೆ. ಅಮ್ಮ ಹೇಳುತ್ತಿದ್ದ ಕವಿ ಮಾತಿನಂತೆ ಮಗುವೊಂದು ಜನಿಸಿದಾಗ ತಾಯಿಯೂ ತಾನಾಗೆ ಜನಿಸುತ್ತಾಳೆ ಎಂಬ ಮಾತು ಎಷ್ಟು ನಿಜ ಎಂದೆನಿಸಿದೆ. ನಾವು ತಾಯಿಯಾದಾಗಲೇ ತಾಯಿಯ ಹಿರಿಮೆ ಅರ್ಥವಾಗುವುದು ಸುಳ್ಳಲ್ಲ.

■ **ಚೇತನ ಭಾರ್ಗವ, ಬೆಂಗಳೂರು**

## ಪೊಲೀಸ್ ಇಲಾಖೆಯ ಮಹಿಳಾ ಕುಸ್ತಿ ಕಲಿ ಬಸೀರಾ ರಾಜೇಸಾಬ ವಕಾರದ್

# ಬಸೀರಾ ಬದುಕಿಗೆ ಉಸಿರಾದ ತೋಂಟದಾರ್ಯ ಮಠ

ಸಾಧಿಸಬೇಕೆಂಬ ಹಸಿವು ನಮ್ಮನ್ನು ಆವರಿಸಿದಾಗ ಎಂತಹ ಸಂಕಷ್ಟಗಳು ಎದುರಾದರೂ ಕೂಡ ಮುನ್ನುಗ್ಗುತ್ತೇವೆ ಕಾರಣ ಸಿದ್ಧಿಸಿ ತೀರ ಬೇಕೆಂಬ ಛಲ.

ದಿನಕ್ಕೆ 80 ಕಿಲೋಮೀಟರ್ಗಳ ಸೈಕಲ್ ಸವಾರಿ ಮಾಡಿಕೊಂಡು ಮುಂಡರಗಿ ಯಿಂದ ಗದಗ ತೆರಳಿ ತರಬೇತಿಯನ್ನು ಪಡೆದಿದ್ದ ನೆನಪುಗಳನ್ನು ಮೆಲುಕು ಹಾಕಿದ ನಮ್ಮ ಈ ಲೇಖನದ ಸಾಧಕಿ ಇವರಾಗಿದ್ದಾರೆ.ತಂದೆ ರಾಜೇಸಾಬ ವೃತ್ತಿಯಲ್ಲಿ ಬಾರ್ಬೆಂಡಿಂಗ್ ಕಬ್ಬಿಣದ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು ಇವರಿಗೆ 10 ಜನ ಮಕ್ಕಳಲ್ಲಿ ಬಸಿರಾ 08ನೇಯವರು.

ವಯೋಸಹಜ ಬಾಲ್ಯಾವಸ್ಥೆ ಕಳೆದು ಋತುಮತಿ ಆದಾಗ ಮುಸ್ಲಿಂ ಧರ್ಮದವರಾದ ಕಾರಣ ಧಾರ್ಮಿಕ ಪರಿಪಾಲನೆ ಮಾಡಬೇಕು ಇನ್ನು ಮುಂದೆ ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಬೇಡ ಎಂದು ಕುಟುಂಬಸ್ಥರು ನಿರ್ಧರಿಸಿದಾಗ ಇವರ ಜವಾಬ್ದಾರಿಯನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ಶರಣಗೌಡ ಬೇಲೇರಿ ಕುಸ್ತಿ ತರಬೇತುದಾರರು ಡಿವೈಈಎಸ್ ಗದಗ ಮುಂದೆ ಬರುತ್ತಾರೆ.

ಸೈಕ್ಲಿಂಗ್ ಕ್ರೀಡೆಯಲ್ಲಿ ರಾಷ್ಟ್ರ ಪದಕವನ್ನುಗಳಿಸಿ ಅಂತರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿರುವ ಇವರು ತಮ್ಮ ತರಬೇತುದಾರರು ನೀಡಿದ ಸೈಕಲ್‌ನಲ್ಲಿ ಸಾಧನೆ ಮಾಡುತ್ತಾರೆ.

ಮುಂದೆ ಉನ್ನತ ತರಬೇತಿಗಾಗಿ ಬಿಜಾಪುರ ಕೋಚಿಂಗ್ ಸೆಂಟರ್ ಗೆ ಆಯ್ಕೆಗೊಂಡ ಸಂದರ್ಭ ಸ್ವಂತ ಸೈಕಲನ್ನು ತೆಗೆದುಕೊಂಡು ಬನ್ನಿ ಎಂದಾಗ ತರಬೇತಿಯನ್ನು ನಿರಾಕರಿಸಿ ಮನೆಯಲ್ಲಿ ಉಳಿಯುತ್ತಾರೆ ಕಾರಣ ವೈಜ್ಞಾನಿಕ ಉನ್ನತ ದರ್ಜೆಯ ಸೈಕಲನ್ನು ಖರೀದಿಸಲು ಬಡತನ ಎದುರಾದುದು.

ಶರಣಗೌಡ ಬೇಲೇರಿ ಅವರು ಇಂತಹ ಸಾಧಕಿಯನ್ನು ಕುಸ್ತಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಇವರಿಗೆ ಉದ್ಯೋಗ ಸಿಗುವವರೆಗೂ ಶರಣಗೌಡರು ಮಗಳಂತೆ ಸಾಕಿ ಸಲಹಿದ್ದಾರೆ ಇದನ್ನು ಸ್ಮರಿಸುತ್ತಾರೆ ಸಾಧಕಿ.

ಕುಸ್ತಿ ಕಲಿಯುವ ಸಂದರ್ಭದಲ್ಲಿ ಇದಕ್ಕಿದ್ದಂತೆ ಮಂಡಿ ನೋವುಗಳು ಕಾಣಲಾರಂಬಿಸಿ ನಡೆಯದ ಪರಿಸ್ಥಿತಿಗೆ ತಲುಪುತ್ತಾರೆ ಊರಿನವರು, ಕುಟುಂಬಸ್ಥರು ಇದೆಲ್ಲ ನಿನಗೆ ಬೇಕಿತ್ತಾ,ಕುಸ್ತಿ ಆಡಬೇಕಿತ್ತ ಎಂದು ಕೊಂಕು ನುಡಿಯುತ್ತಾರೆ. ಇದರಿಂದ ಮಾನಸಿಕವಾಗಿ ಜರ್ಜರಿ ತರಾಗುತ್ತಾರೆ ಬಸೀರಾ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಬಸವ ರೆಡ್ಡಿ ಗದಗದ ಹಾಸ್ಪಿಟಲ್ ನಲ್ಲಿ ಚಿಕಿತ್ಸೆ ಪಡೆದರು ಕಾಯಿಲೆಗೆ ಸರಿಯಾದ ಕಾರಣ ತಿಳಿಯುವುದಿಲ್ಲ 03 ರಿಂದ 06 ತಿಂಗಳು ವಿಶ್ರಾಂತಿ ಪಡೆಯಬೇಕಾದ ಪರಿಸ್ಥಿತಿ ಎದುರಾಗಿ ಟಿವಿ ನೋಡಿ ಕೊಂಡು ಮಲಗಿದ್ದಾಗ ವಿಕ್ರಂ ಹರಿದಾಸ್ ಹಾಸ್ಪಿಟಲ್ ಜಾಹೀರಾತು ಗಮನಿಸಿ ಅಲ್ಲಿ ಚಿಕಿತ್ಸೆ ಪಡೆದ ನಂತರ ಒಂದು ತಿಂಗಳಲ್ಲಿ ನಡೆಯಲು ಆರಂಭಿಸುತ್ತಾರೆ.

ಬೇಲೇರಿಯವರ ಮಾತು ಗಳಿಂದ ಧೈರ್ಯ ತೆಗೆದುಕೊಂಡು ಮತ್ತೆ ಕ್ರೀಡೆಯಲ್ಲಿ ಪಾಲ್ಗೊಳ್ಳುತ್ತಾರೆ



ಅಲ್ಲಿಂದ ಕ್ರೀಡಾ ಸಾಧನೆ ಯಶೋಗಾಥೆ ಆರಂಭವಾಗುತ್ತದೆ.

ಸದ್ಯ ಕ್ರೀಡಾಕೂಟಾದಡಿ ಪೊಲೀಸ್ ಪೇದೆಯಾಗಿ 2023 ರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ದೇವನಹಳ್ಳಿ ಆರಕ್ಷಕ ಠಾಣೆಯಲ್ಲಿ ಉದ್ಯೋಗ ನಿರ್ವಹಿಸುತ್ತಿದ್ದು ದಾವಣಗೆರೆಯ ಕುಸ್ತಿ ಹಾಸ್ಟೆಲಿನಲ್ಲಿ ತರಬೇತಿಯನ್ನು ಮುಂದುವರಿಸಿ ಹಲವು ಪದಕಗಳನ್ನು ಪಡೆದಿದ್ದಾರೆ.

ಮುಸ್ಲಿಂ ಹೆಣ್ಣು ಮಕ್ಕಳು ಧಾರ್ಮಿಕ ಕಟ್ಟುಪಾಡುಗಳ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ದೇಶದ ಕೀರ್ತಿಯನ್ನು ಹೆಚ್ಚಿಸಬೇಕು.

ಮುಂದುವರೆದ ದೇಶಗಳಲ್ಲಿ ಮುಸ್ಲಿಂ ಯುವತಿಯರು ಎಲ್ಲಾ ಕ್ರೀಡೆಗಳನ್ನು ಪಾಲ್ಗೊಳ್ಳುತ್ತಾರೆ ಅದೇ ರೀತಿ ನಮ್ಮ ಭಾರತೀಯ ಮುಸ್ಲಿಂ ಮಹಿಳೆಯರು ಕೂಡ ಭಾಗವಹಿಸಿ ಭಾರತ ಮಾತೆಯ ಕೀರ್ತಿಯನ್ನು ಹೆಚ್ಚಿಸಬೇಕು ಎಂದು ಮುಸ್ಲಿಂ ಯುವತಿಯನ್ನು ಕ್ರೀಡೆಗೆ ಆಹ್ವಾನಿಸುತ್ತಾರೆ.

ಸರ್ಕಾರ ಮೀಸಲಾತಿ ಹೆಚ್ಚಿಸಿ ಪ್ರತಿವರ್ಷ ಕ್ರೀಡಾಪಟುಗಳಿಗೆ ಉದ್ಯೋಗವನ್ನು ನೀಡಬೇಕು ಹಾಗೂ ಸಾಧನೆಯನ್ನು ಪರಿಗಣಿಸಿ ಶಿಷ್ಯವೇತನ ನೀಡಬೇಕೆಂದು ವಿನಂತಿಸುತ್ತಾರೆ.

ಗದುಗಿನ ತೋಂಟದಾರ್ಯ ಮಠದ ಗುರುಗಳಾದ ಸಿದ್ದರಾಮಯ್ಯ ಸ್ವಾಮೀಜಿಗಳವರು ಬಡತನದಲ್ಲಿದ್ದ ನನ್ನನ್ನು ಗುರುತಿಸಿ, ನನ್ನ ಸಾಧನೆಯನ್ನು ಪರಿಗಣಿಸಿ ನನಗೆ ಮಠದ ಸ್ಥಳದಲ್ಲಿಯೇ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿದ್ದಾರೆ ಅದನ್ನು ನನ್ನ ಹೆಸರಿಗೆ ರಿಜಿಸ್ಟರ್ ಮಾಡಿಸಿದ್ದಾರೆ ಹಾಗೂ ನನ್ನ ಕುಟುಂಬ ವರ್ಗಕ್ಕೆ ಅಕ್ಕಿ,ಬೇಳೆ,ಬೆಲ್ಲ ಮತ್ತಿತರೆ ಆಹಾರ ಪರಿಕರಗಳನ್ನು ಕೊಟ್ಟು ಹಸಿವನ್ನು ನೀಗಿಸಿದ್ದಾರೆ ಮಠವನ್ನು ಹಾಗೂ ಗುರುಗಳನ್ನು ನನ್ನ ಜೀವನದಲ್ಲಿ ಮರೆಯಲು ಸಾಧ್ಯವೇ ಇಲ್ಲ ಅವರ ಪಾದಗಳಿಗೆ ಸದಾ ಕಾಲ ನನ್ನ ಶರಣು ಎಂದು ಮಠದ ಮೇಲಿನ ಭಕ್ತಿಯನ್ನು ಅರ್ಪಿಸುತ್ತಾರೆ.

ಕುಸ್ತಿ ತರಬೇತುದಾರರಾದ ಶರಣಗೌಡ ಬೇಲೇರಿ ನನ್ನ ತಂದೆಯ ಸ್ಥಾನದಲ್ಲಿ ನಿಂತು ನನಗೆ ಕೆಲಸ ಸಿಗುವರೆಗೂ ಇದ್ದು ಈಗ ಸುಖದ ಸ್ಥಿತಿಯಲ್ಲಿ ನಮ್ಮನ್ನು ಬಿಟ್ಟು ಅಗಲಿದ್ದಾರೆ ಆದರೂ ಅವರ ನೆರವಿಗೆ ನನ್ನ ಶಿರಷ್ಟಾಂಗ ನಮಸ್ಕಾರಗಳನ್ನು ತಿಳಿಸುತ್ತೇನೆ ಎನ್ನುತ್ತಾರೆ.

ನನಗೆ ವಿದ್ಯಾಭ್ಯಾಸ ದೊರಕಿಸಿಕೊಟ್ಟ ನನ್ನ ಎಲ್ಲಾ ಶಿಕ್ಷಕ ಬಂಧುಗಳಿಗೆ,ತಾಯಿ-ಕಾಶಿಂಬಿ, ಕುಟುಂಬಸ್ಥರು ಹಾಗೂ ಸೈಕ್ಲಿಂಗ್ ತರಬೇತಿ ನೀಡಿದ ಎಂ.ಪಿ.ಮರನೂರ ಸರ್, 05ನೇ ತರಗತಿ ಓದುತ್ತಿದ್ದಾಗ ನನ್ನನ್ನು ಸೈಕ್ಲಿಂಗ್ ಆಯ್ಕೆಗೆ ಕರೆದುಕೊಂಡು ಹೋದ ಕಲ್ಕೇರಿ ದೈಹಿಕ ಶಿಕ್ಷಣ ಶಿಕ್ಷಕರು ಇವರಿಗೆ ಹಾಗೂ ನನ್ನನ್ನು ಗೌರವಿಸಿದ ಎಲ್ಲಾ ಸಂಘ-ಸಂಸ್ಥೆಗಳಿಗೆ ಊರಿನ ಹಿರಿಯರಿಗೆ ಕುಸ್ತಿ ತರಬೇತುದಾರರಿಗೆ, ಪೊಲೀಸ್ ಇಲಾಖೆಗೆ ಧನ್ಯವಾದಗಳು ಅರ್ಪಿಸುತ್ತಾರೆ.

ಧಾರ್ಮಿಕ ಕಟ್ಟುಪಾಡುಗಳಿಗೆ ಮಣಿದು ಮನೆ ಮೂಲೆ ಸೇರದೆ ದೇಶದ ಗೌರವಕ್ಕಾಗಿ ದುಡಿಯುತ್ತಿರುವ ನೀವು ಹಾಗೂ ನಿಮ್ಮ ಮುಂದಿನ ದಿನಗಳಲ್ಲಿನ ಕ್ರೀಡಾ ಸಾಧನೆ ಇನ್ನಷ್ಟು ಹೆಚ್ಚಿ ಅಂತರಾಷ್ಟ್ರೀಯ ಮಟ್ಟದಲ್ಲಿ ಇಲಾಖೆಗೆ ಹಾಗೂ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಪದಕ ಬರುವಂತಾಗಲಿ ಎಂದು ಆಶಿಸುತ್ತೇವೆ.

### ಕ್ರೀಡಾ ಸಾಧನೆಗಳು

2019(ತಮಿಳುನಾಡು)ಸೌತ್ ಇಂಡಿಯಾ ಸೀನಿಯರ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 50 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

2012(ಹರಿಯಾಣ)04ನೇ ನ್ಯಾಷನಲ್ ರೂರಲ್ ರೆಸ್ಲಿಂಗ್ ಟೂರ್ನಮೆಂಟ್ 40 ಕೆ.ಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2017(ತಮಿಳುನಾಡು)ಸೀನಿಯರ್ ಸೌತ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 50 ಕೆ.ಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ.

2011(ಜೈಪುರ)03ನೇ ರಾಷ್ಟ್ರೀಯ ಕುಸ್ತಿ ಚಾಂಪಿಯನ್ಶಿಪ್ 50 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2012(ಹಿಮಾಚಲ ಪ್ರದೇಶ)ಸಬ್ ಜೂನಿಯರ್ ನ್ಯಾಷನಲ್ ಚಾಂಪಿಯನ್ಶಿಪ್ 40 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2011(ತಮಿಳುನಾಡು)ಜೂನಿಯರ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ ಕಂಚಿನ ಪದಕ.

2017(ಹರಿಯಾಣ)ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡದ ಕುಸ್ತಿಪಟುವಾಗಿ ಅಂತರ ವಿಶ್ವವಿದ್ಯಾನಿಲಯದ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ 50 ಕೆಜಿ ದೇಹ ತೂಕ ವಿಭಾಗದಲ್ಲಿ ನಾಲ್ಕನೇ ಸ್ಥಾನ.

2015 ಮೈಸೂರಿನಲ್ಲಿ ನಡೆದ ಅಂತರ ವಿಶ್ವವಿದ್ಯಾನಿಲಯ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಧಾರವಾಡ ವಿಶ್ವವಿದ್ಯಾನಿಲಯದ ಕುಸ್ತಿಪಟುವಾಗಿ ಪ್ರತಿನಿಧಿಸಿ 50 ಕೆಜಿ ದೇಹ ತೂಕ ವಿಭಾಗದಲ್ಲಿ 04ನೇ ಸ್ಥಾನವನ್ನು ಪಡೆದಿರುತ್ತಾರೆ.

ಮೈಸೂರು ದಸರಾ ಉತ್ತಮ ಮಹಿಳಾ ಕುಸ್ತಿಪಟು,ಹಂಪಿ ಕಿಶೋರಿ,ಲಕ್ಕುಂಡಿ ಕಿಶೋರಿ ಮತ್ತಿತರೆ ಟೈಟಲ್ ಗಳನ್ನು ಪಡೆದಿರುತ್ತಾರೆ.

ಜಮಖಂಡಿಯಲ್ಲಿ ನಡೆದ ನ್ಯಾಷನಲ್ ಹಿಂದ್ ಕೇಸರಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿ ಕಂಚಿನ ಪದಕ.

2023-24ನೇ ಸಾಲಿನ ಪೊಲೀಸ್ ಇಲಾಖೆಯ ರಾಷ್ಟ್ರಮಟ್ಟದ ಕ್ರೀಡಾಕೂಟ ಹರಿಯಾಣದಲ್ಲಿ ಭಾಗವಹಿಸಿ 53 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ ಮತ್ತು ಎಸ್ ಎಸ್ ಬಿ ಪಂಜಾಬ್ 2024-25ನೇ ಸಾಲಿನ ಇಲಾಖೆ ಕುಸ್ತಿ ಸ್ಪರ್ಧೆಯ 50 ಕೆಜಿ ದೇಹ ತೂಕ ವಿಭಾಗದಲ್ಲಿ ಭಾಗವಹಿಸಿ ಕಂಚಿನ ಪದಕ ಗಳಿಸಿರುತ್ತಾರೆ ಇವರು ಕರ್ನಾಟಕ ಪೊಲೀಸ್ ಇಲಾಖೆಯ ಇತಿಹಾಸದಲ್ಲಿ ಪದಕ ಪಡೆದ ಮೊದಲ ಕುಸ್ತಿಪಟುವಾಗಿದ್ದಾರೆ.

# ಉತ್ತಮ ನಾಯಕನಲ್ಲಿ ಇರಬೇಕಾದ ಗುಣಗಳು

■ **ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟೆ.**



ನಾಯಕತ್ವ ಎಂದರೆ ಜವಾಬ್ದಾರಿಯೇ ಹೊರತು ಅಧಿಕಾರವಲ್ಲ. ಆತ್ಮವಿಶ್ವಾಸದ ಮೂಲಕ ತನ್ನ ಅನುಯಾಯಿಗಳಿಗೆ ಮಾದರಿಯಾದಾಗ ಮಾತ್ರ ನಾಯಕತ್ವ ಯಶಸ್ವಿಯಾಗಬಲ್ಲದು. ತಾನಂದುಕೊಂಡ ಗುರಿಯನ್ನು ಸಾಧಿಸಲು ನಾಯಕನು ಬರಿ ಬೋಧನೆ ಮಾಡುವ ಬದಲು ಕಾರ್ಯೋನ್ಮುಖನಾಗಬೇಕಾಗುತ್ತದೆ. ನಾಯಕತ್ವದ ಗುಣವು ಒಮ್ಮೆಂದೊಮ್ಮೆಲೆ ರೂಪುಗೊಳ್ಳಲು ಸಾಧ್ಯವಿಲ್ಲ. ಸರಿಯಾದ ಪ್ರಯತ್ನ ಮತ್ತು ಸಮರ್ಪಣಾ ಭಾವದೊಂದಿಗೆ ಯಾರಾದರೂ ಉತ್ತಮ ನಾಯಕರಾಗಬಹುದು. ಈ ನಿಟ್ಟಿನಲ್ಲಿ ನಾಯಕನು ಧನಾತ್ಮಕ ಮತ್ತು ಅಪೇಕ್ಷಿತ ಗುಣಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಳ್ಳಬೇಕಾ ಗುತ್ತದೆ.

**ಉತ್ತಮ ನಾಯಕನಲ್ಲಿ ಇರಬೇಕಾದ ಗುಣಗಳು:**



**1.ಬುದ್ಧಿವಂತಿಕೆ:** ನಾಯಕನು ತನ್ನ ಸುತ್ತಮುತ್ತಲಿನ ವಿದ್ಯಮಾನಗಳ ಕುರಿತು ಸಾಮಾನ್ಯ ಜ್ಞಾನವನ್ನು ಹೊಂದಿರಬೇಕಾದದ್ದು ಅಪೇಕ್ಷಣೀಯ. ಕ್ಷಿಪ್ರಗತಿಯಲ್ಲಿ ವಿಷಯವನ್ನು ಗ್ರಹಿಸುವ, ವಿಚಾರ ಮಂಡಿಸುವ ವಿವೇಚನಾ ಶಕ್ತಿ ಅತಿ ಮುಖ್ಯ. ಅಧ್ಯಯನ ಮತ್ತು ಅನುಭವಗಳ ಮೂಲಕಬುದ್ಧಿವಂತಿಕೆಯನ್ನುವೃದ್ಧಿಸಿಕೊಂಡಾಗ ಆತನ ಬಗೆಗೆ ಗೌರವದ ಜೊತೆಗೆ ಅವ್ಯಕ್ತ ಅಭಿಮಾನವು ತಾನೇ ತಾನಾಗಿ ರೂಪುಗೊಳ್ಳುತ್ತದೆ.

**2. ಸಂಘಟನಾ ಕೌಶಲ್ಯ:** ನಾಯಕತ್ವ ವಹಿಸಿಕೊಂಡವರು ಸಂಘಟನಾ ಚಾತುರ್ಯವನ್ನು ಮೈಗೂಡಿಸಿಕೊಳ್ಳಬೇಕು. ಎಲ್ಲರಿಗೂ ಆದ್ಯತೆಯ ಮೇರೆಗೆ ಜವಾಬ್ದಾರಿಗಳನ್ನು ಹಂಚಿಕೆ ಮಾಡಬೇಕು. ಎಲ್ಲರನ್ನೂ ಸಮಾನ ರೀತಿಯಲ್ಲಿ ನಡೆಸಿಕೊಂಡಾಗ ಸಂಘಟನೆ ಮತ್ತಷ್ಟು ಬಲಗೊಳ್ಳಲು ಸಾಧ್ಯ. ಲಭ್ಯವಿರುವ ಸಂಪನ್ಮೂಲಗಳನ್ನು ಉತ್ತಮವಾಗಿ ನಿರ್ವಹಿಸುವ ಜಾಣ್ಮೆ ಅಪೇಕ್ಷಿತ.

**3. ತಾರ್ಕಿಕ ಆಲೋಚನಾ ಸಾಮರ್ಥ್ಯ:** ನಾಯಕನು ಯಾವುದೇ ವಿಷಯವನ್ನಾಗಲೀ ಹಿಂದು-ಮುಂದು ಯೋಚಿಸದೆ ಒಪ್ಪಿಕೊಳ್ಳೋ ಬದಲು ತಾರ್ಕಿಕವಾಗಿ ಆಲೋಚಿಸುವ ಮೂಲಕ ಉತ್ತಮ ಸಾಧ್ಯತೆಗಳ ಕಡೆಗೆ ತನ್ನ ನಿಲುವನ್ನು ತಾಳಬೇಕಾಗುತ್ತದೆ. ವಿಷಯವನ್ನು ವಿಶ್ಲೇಷಿಸುವ ಕ್ಷಮತೆ ರೂಢಿಸಿಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಲಭ್ಯವಿರುವ ಮಾಹಿತಿ ಆಧಾರದ ಮೇಲೆ ಕ್ಷಿಪ್ರವಾಗಿ ತೀರ್ಮಾನ ಕೈಗೊಳ್ಳುವ ಸಾಮರ್ಥ್ಯ ನಾಯಕನಲ್ಲಿ ಇರಬೇಕಾಗುತ್ತದೆ.

**4. ಅಭಿವ್ಯಕ್ತಿ ಸಾಮರ್ಥ್ಯ:** ತನ್ನ ತಂಡದ ಸದಸ್ಯರಿಗೆ ವಿಷಯವನ್ನು ಸರಳವಾಗಿ, ಸ್ಪಷ್ಟವಾಗಿ ಅರ್ಥೈಸುವ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೊಂದಿರಬೇಕು.ಯಾವುದೇವಿಷಯದಲ್ಲಾಗಲಿಗೊಂದಲವನ್ನುಂಟು ಮಾಡುವ ರೀತಿಯ ಹೇಳಿಕೆಗಳನ್ನು ಮತ್ತು ಸೂಚನೆಗಳನ್ನು ನೀಡಬಾರದು.

**5. ದೃಢ ನಿರ್ಧಾರ:** ನಾಯಕನಿಗೆ ತನ್ನ ಗುರಿಯ ಬಗೆಗೆ ಸ್ಪಷ್ಟ ತಿಳುವಳಿಕೆ ಇರಬೇಕು.ಎಲ್ಲರೂ ಕೂಡಿ ಕೈಗೊಂಡ ನಿರ್ಣಯಕ್ಕೆ ಆತನು ಬದ್ಧನಾಗಿರಬೇಕು. ಸಾಧನೆಯ ಮಾರ್ಗದಲ್ಲಿ ಎದುರಾಗಬಹುದಾದ ತೊಡಕುಗಳನ್ನು ಚಾಣಾಕ್ಷತನದಿಂದ ಪರಿಹರಿಸುವ ಜಾಣ್ಮೆ ನಾಯಕನ ಪ್ರಮುಖ ಲಕ್ಷಣವಾಗಿದೆ.

**6. ಸಹಕಾರ ಗುಣ:** ತಾನೊಬ್ಬನೇ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಹಾಗಾಗಿ ತಂಡದ ಸದಸ್ಯರ ಸಹಕಾರ ಪಡೆಯುವ ಗುಣ ನಾಯಕನಲ್ಲಿರಬೇಕು. ತಂಡದ ಸದಸ್ಯರ ಜೊತೆ ಉತ್ತಮ ವಿಶ್ವಾಸವನ್ನು ಗಳಿಸುವ ಮೂಲಕ ಎಲ್ಲರೊಳಗೆ ತಾನೊಂದಾಗಿ ಅವರನ್ನು ಮುನ್ನಡೆಸಬೇಕಾದದ್ದು ನಾಯಕನ ಪ್ರಮುಖ ಜವಾಬ್ದಾರಿಯಾಗಿದೆ.

**7. ಸಂವಹನ ಕೌಶಲ:** ನಾಯಕನು ಉತ್ತಮ ಸಂವಹನಕಾರನಾಗಿರಬೇಕು. ವಿಷಯದ ಮತ್ತು ಗುರಿಯ ಕುರಿತು ವಿಸ್ತಾರ ಜ್ಞಾನವನ್ನು ಅರ್ಜಿಸಿ, ತನ್ನ ತಂಡದ ಸದಸ್ಯರುಗಳಿಗೆ ಸ್ಪಷ್ಟವಾಗಿ ಮನವರಿಕೆ ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಆತನು ಉತ್ತಮ ಮಾತುಗಾರಿಕೆಯನ್ನು ರೂಢಿಸಿಕೊಳ್ಳಬೇಕು.

**8. ಧೈರ್ಯಶಾಲಿತನ:** ಧೈರ್ಯಂ ಸರ್ವತ್ರ ಸಾಧನಂ ಎನ್ನುವ ಮಾತಿನಂತೆ ನಾಯಕನಲ್ಲಿ ಧೈರ್ಯದ ಗುಣವಿದ್ದಾಗ ಮಾತ್ರ ತಂಡದ ಸದಸ್ಯರು ಆತನ ಜೊತೆ ನಿಲ್ಲುತ್ತಾರೆ. ಅಪಾಯ ಎದುರಾದಾಗ ಉಪಾಯದಿಂದ ಅದನ್ನು ಎದುರಿಸುವ ಮತ್ತು ಅಂತಹ ಸಮಯದಲ್ಲಿ ಅದನ್ನೆದುರಿಸಲು ತಾನೇ ಮೊದಲಿಗನಾಗಿ ನಿಲ್ಲುವ ಗುಣ ನಾಯಕನಲ್ಲಿರಬೇಕು.

**9. ಧನಾತ್ಮಕ ಚಿಂತನೆ:** ಯಾವುದೇ ವಿಷಯದಲ್ಲಾಗಲಿ ಧನಾತ್ಮಕ ಚಿಂತನೆಯ ಗುಣ ಅತಿ ಮುಖ್ಯ. ತಮ್ಮಿಂದ ಇದು ಸಾಧ್ಯ. ತಾವು ಇದನ್ನು ಸಾಧಿಸಿಯೇ ತಿರುವಿರಿ ಎಂಬ ಪ್ರೋತ್ಸಾಹದ ಮಾತುಗಳು ತಂಡದ ಸದಸ್ಯರಲ್ಲಿ ಹುರುಪನ್ನುಂಟುಮಾಡುತ್ತವೆ.

**10. ಆತ್ಮವಿಶ್ವಾಸ:** ಧೈರ್ಯ ಮತ್ತು ಆತ್ಮವಿಶ್ವಾಸಗಳು ಒಂದೇ ನಾಣ್ಯದ ಎರಡು ಮುಖಗಳು. ಯಾರಲ್ಲಿ ಧೈರ್ಯವಿರುತ್ತದೋ ಅವರಲ್ಲಿ ಆತ್ಮವಿಶ್ವಾಸವಿರುತ್ತದೆ. ಆತ್ಮವಿಶ್ವಾಸವಿದ್ದಾಗ ಮಾತ್ರ ನಿರ್ಣಯಗಳನ್ನು ಕೈಗೊಳ್ಳಲು ಸಾಧ್ಯ. ಆತ್ಮವಿಶ್ವಾಸವು ಸ್ಥಿರ ಮನಸ್ಥಿತಿಗೆ ಸಹಕಾರಿ. ಹಾಗೆಯೇ ಅತಿಯಾದ ಆತ್ಮವಿಶ್ವಾಸದ ಬಗೆಗೂ ಎಚ್ಚರಿಕೆ ಇರಬೇಕು.

**11. ಮಾದರಿ:** ನಾಯಕನು ತನ್ನ ನಡೆ-ನುಡಿಯಲ್ಲಿ, ಹಣಕಾಸಿನ ವಿಷಯದಲ್ಲಿ, ಮಾತಿನಲ್ಲಿ,ಸಮಯ ಪಾಲನೆಯಲ್ಲಿ ತನ್ನ ತಂಡದ ಸದಸ್ಯರಿಗೆ ಮಾದರಿಯಾಗಿರಬೇಕು. ಆತನ ಗುಣವೇ ಆತನ ಅನುಚರರಿಗೆ ಪಾಠವಾಗಬೇಕು.

**ನಾಯಕತ್ವ ಕುರಿತು ಗಣ್ಯರ ಅನಿಸಿಕೆಗಳು:**

1. ಅತ್ಯುತ್ತಮ ನಾಯಕರು ಎಂದರೆ ತಮಗಿಂತ ಬುದ್ಧಿವಂತರಾದ ಸಹಾಯಕರು ಮತ್ತು ಸಹಚರರೊಂದಿಗೆ ತಮ್ಮನ್ನು ಸುತ್ತುವರೆದಿರುವಲ್ಲಿ ಹೆಚ್ಚು ಆಸಕ್ತಿ ಹೊಂದಿರುವವರು. – ಮಹಾತ್ಮ ಗಾಂಧೀಜಿ.
2. ನಾಯಕತ್ವ ಎಂದರೆ ಸ್ಥಾನವಲ್ಲ, ಕ್ರಿಯೆ.
– ಡೊನಾಲ್ಡ್ ಎಚ್. ಮೆಕ್ಗಾನನ್.
3. ನಾಯಕತ್ವ ಎಂದರೆ ದೃಷ್ಟಿಯನ್ನು ವಾಸ್ತವಕ್ಕೆ ಭಾಷಾಂತರಿಸುವ ಸಾಮರ್ಥ್ಯ. – ವಾರೆನ್ ಜಿ ಬೆನ್ನಿಸ್.
4. ಯಶಸ್ವಿ ನಾಯಕತ್ವದ ಕೀಲಿ ಕೈ ಅಧಿಕಾರವಲ್ಲ, ಪ್ರಭಾವ.
– ಕೆನ್ ಬ್ಲಾಂಚರ್ಡ್.
5. ಶ್ರೇಷ್ಠ ನಾಯಕ ಎಂದರೆ ಶ್ರೇಷ್ಠ ಕೆಲಸಗಳನ್ನು ಮಾಡುವವನು ಎಂದೇನೂ ಅಲ್ಲ. ಜನರನ್ನು ಶ್ರೇಷ್ಠ ಕೆಲಸಗಳನ್ನು ಮಾಡುವಂತೆ ಪ್ರೇರೇಪಿಸುವವನು – ರೊನಾಲ್ಡ್ ರೇಗನ್.
6. ನಿಜವಾದ ನಾಯಕನಿಗೆ ಒಬ್ಬಂಟಿಯಾಗಿ ನಿಲ್ಲುವ ಆತ್ಮವಿಶ್ವಾಸ, ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಧೈರ್ಯ, ಮತ್ತು ಇತರರ ಅಗತ್ಯಗಳನ್ನು ಆಲಿಸುವ ಕರುಣೆ ಇರುತ್ತದೆ – ಡೌ ಗ್ಲಾಸ್ ಅರ್ಥರ್.
7. ನಾಯಕತ್ವ ಎಂದರೆ ಅತ್ಯುತ್ತಮರಾಗುವುದಲ್ಲ. ಉಳಿದವರೆಲ್ಲರನ್ನು ಉತ್ತಮಗೊಳಿಸುವುದು – ಅಜ್ಞಾತ.

**ಕೊನೆಯ ಮಾತು:** ಒಟ್ಟಿನಲ್ಲಿ ನಾಯಕನಾದವನಿಗೆ ಸ್ವತಃ ತನ್ನ ಸಾಮರ್ಥ್ಯದ ಮೇಲೆ ಭರವಸೆ ಇರಬೇಕು. ದೃಢ ನಿರ್ಧಾರ,ನಿಷ್ಠೆ ಹಾಗೂ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ, ದಕ್ಷವಾಗಿ ನಿರ್ವಹಿಸುವ ಕೌಶಲ ಬೆಳೆಸಿಕೊಳ್ಳಬೇಕು. ಯಾವುದೇ ಕೆಲಸವನ್ನಾಗಲಿ ಹಗುರವಾಗಿ ಪರಿಗಣಿಸದೆ ಬಹು ಸೂಕ್ಷ್ಮವಾಗಿ ಅವಲೋಕಿಸುವ ಗುಣ ಇರಬೇಕು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

-: ಸಂಪಾದಕರು :-

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಮೈಕ್ರೋ ನ್ಯೂಸ್

## ಬುದ್ಧರ ಆದರ್ಶ ಸಿದ್ಧಾಂತಗಳು ಯುವ ಜನತೆಗೆ ಮಾದರಿ



**ಹಂಪಿ ಟೈಮ್ಸ್ ಕೂಡ್ಲಿಗಿ**
ಬೌದ್ಧ ಧರ್ಮದ ಸಂಸ್ಥಾಪಕ ಗೌತಮ ಬುದ್ಧ ಮಹಾನ್ ದಾರ್ಶನಿಕ, ಅವರ ತತ್ವಾದರ್ಶಗಳು ಯುವ ಜನತೆಗೆ ಮಾದರಿ ಎಂದು ತಹಸೀಲ್ದಾರ್ ವಿ. ಕೆ.ನೇತ್ರಾವತಿ ಹೇಳಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ಸೋಮವಾರ ತಾಲೂಕು ಆಡಳಿತದ ವತಿಯಿಂದ ಭಗವಾನ್ ಬುದ್ಧ ಜಯಂತಿ ಅಂಗವಾಗಿ ಭಗವಾನ್ ಬುದ್ಧ ಭಾವಚಿತ್ರಕ್ಕೆಪುಷ್ಪನಮನ ಸಲ್ಲಿಸಿ ಮಾತನಾಡಿದರು. ಸಿದ್ಧಾರ್ಥ ಎನ್ನುವ ರಾಜವಂಶದ ಕುಡಿ ಸಕಲ ವೈಭೋಗವನ್ನು ತ್ಯಜಿಸಿ, ಜ್ಞಾನೋದಯ ಪಡೆದು ಗೌತಮ ಬುದ್ಧನಾಗುತ್ತಾನೆ, ಲೋಕಕ್ಕೆ ಶಾಂತಿ, ಅಹಿಂಸೆಯ ಮಹತ್ವವನ್ನು ಭೋಧಿಸುತ್ತಾನೆ. ಬುದ್ಧನ ಜನನ, ಮರಣ ಹಾಗೂ ಜ್ಞಾನೋದಯವನ್ನು ಸ್ಮರಿಸುವ ಉದ್ದೇಶದಿಂದ ಪ್ರತಿ ವರ್ಷ ಬುದ್ಧ ಪೂರ್ಣಿಮೆಯನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು. ಗೌತಮ ಬುದ್ಧನು ಬುದ್ಧ ಪೂರ್ಣಿಮೆಯಂದು ಜ್ಞಾನೋದಯವನ್ನು ಪಡೆದನೆಂದು ನಂಬಲಾಗಿದೆ. ಬುದ್ಧನು ತನ್ನ ಜೀವನದ 45 ವರ್ಷಗಳನ್ನು ಧರ್ಮ, ಅಹಿಂಸೆ, ಸಾಮರಸ್ಯ, ಕರುಣೆ ಮತ್ತು ನಿರ್ವಾಣದ ಮಾರ್ಗವನ್ನು ಬೋಧಿಸುತ್ತಾ ಕಳೆದನು.
ಬುದ್ಧ ಪೂರ್ಣಿಮೆಯು ಬೌದ್ಧಧರ್ಮದ ಅತ್ಯಂತ ಪವಿತ್ರ ದಿನಗಳಲ್ಲಿ ಒಂದಾಗಿದೆ. ಈ ಬಾರಿ ನಾವು ಭಗವಾನ್ ಬುದ್ಧನ 2587ನೇ ಜನ್ಮ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಭಾರತ ಸೇರಿದಂತೆ ಥಾಯ್ಲೆಂಡ್, ಚೀನಾ, ಕಾಂಬೋಡಿಯಾ, ನೇಪಾಳ, ಶ್ರೀಲಂಕಾ ಹಾಗೂ ಟಿಬೆಟ್ ಸೇರಿದಂತೆ ಅನೇಕ ಏಷ್ಯಾದ ದೇಶಗಳು ಬುದ್ಧ ಪೂರ್ಣಿಮೆಯನ್ನು ಆಚರಿಸುತ್ತವೆ ಎಂದು ತಿಳಿಸಿದರು.
ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ಒನಕೆ ಓಬವ್ವ ಸಂಘದ ರಾಜ್ಯಾಧ್ಯಕ್ಷ ಹಿರೇಕುಂಬಳಗುಂಟೆ ಉಮೇಶ್, ನಿವೃತ್ತ ಶಿಕ್ಷಕ ಬಸಪ್ಪ, ಶಿರಸ್ತೆದಾರ ಮಹಮದ್ ಗೌಸ್, ಪ್ರಭುಕುಮಾರ್ ಸೇರಿದಂತೆ ಅನೇಕ ಸಿಬ್ಬಂದಿಗಳು ಇದ್ದರು.

## ಇಂದಿನಿಂದ ಕೊಪ್ಪಳ ಮಾವು ಪ್ರದರ್ಶನ ಹಾಗೂ ಮಾರಾಟ ಮೇಳ


**ಹಂಪಿ ಟೈಮ್ಸ್ ಕೊಪ್ಪಳ**
ನೈಸರ್ಗಿಕವಾಗಿ ಮತ್ತು ವೈಜ್ಞಾನಿಕವಾಗಿ ಮಾಗಿಸಿದ ವಿವಿಧ ತಳಿಗಳ ಮಾವಿನ ಹಣ್ಣುಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ, ರೈತರಿಂದ ಖರೀದಿಸಿ ರೈತರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕೊಪ್ಪಳ ತೋಟಗಾರಿಕೆ ಇಲಾಖೆ ವತಿಯಿಂದ "ಕೊಪ್ಪಳ ಮಾವು ಮೇಳ-2025" ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಮೇ 13 ರಿಂದ 22ರ ವರೆಗೆ ನಗರದ ತೋಟಗಾರಿಕೆ ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದ್ದು, ಉದ್ಘಾಟನಾ ಕಾರ್ಯಕ್ರಮ ಮೇ 13ರ ಬೆಳಗ್ಗೆ 10.30 ಗಂಟೆಗೆ ನಡೆಯಲಿದೆ. ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸುವರು. ತೋಟಗಾರಿಕೆ ಮತ್ತು ಗಣಿ ಹಾಗೂ ಭೂ ವಿಜ್ಞಾನ ಇಲಾಖೆಯ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ, ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಅಧ್ಯಕ್ಷತೆ ವಹಿಸುವರು.
ಮುಖ್ಯ ಅತಿಥಿಗಳಾಗಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಡಾ.ಚಂದ್ರಶೇಖರ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ, ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆಯ ಅಧ್ಯಕ್ಷರಾದ ಹಸನಸಾಬ ನಭಿಸಾಬ ದೋಟಿಹಾಳ, ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಶ್ರೀನಿವಾಸ್ ಗುಪ್ತಾ , ಕೊಪ್ಪಳ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶೇಖರಗೌಡ ಮಾಲೀಪಾಟಿಲ್, ಇತರರು ಭಾಗವಹಿಸುವರು ಎಂದು ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ.ಸಿ ಉಕ್ಕುಂದ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಜೆ.ಶಂಕ್ರಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜಕೀಯ ಹಿಡಿತದಲ್ಲಿ ಸಾಹಿತ್ಯ ?

**ರಾಜಕಾರಣದಿಂದ ಸಾಹಿತ್ಯವನ್ನು ಆಳಲಿಲ್ಲ, ಬದಲಿಗೆ ಸಾಹಿತ್ಯದಿಂದ ರಾಜಕಾರಣವನ್ನು ಆಳಿದ ಕಾಲವೊಂದಿತ್ತು. ಇಂದು ಸಾಹಿತಿಗಳ ಮನೆ ಮುಂದೆ ರಾಜಕಾರಣಿಗಳು ಕಾಣಸಿಗುವುದಿಲ್ಲ. ರಾಜಕಾರಣಿಗಳ ಮನೆಮುಂದೆ ಸಾಹಿತಿಗಳು....... ಸಾಹಿತ್ಯದೊಳಗೆ ರಾಜಕೀಯ ಪ್ರವೇಶದಿಂದ ಗುಣಾತ್ಮಕ ಸಾಹಿತ್ಯ, ನೈಜ ಸಾಹಿತಿಗಳನ್ನ ಕಡೆಗಣಿಸಲ್ಪಡಲಾಗುತ್ತಿದೆ.**

ಕನ್ನಡ ಭಾಷೆ ಹಾಗೂ ಸಾಹಿತ್ಯ ನಾಡು-ನುಡಿ-ನಾಡವರ ಸಾಂಸ್ಕೃತಿಕ ಅಭಿವ್ಯಕ್ತಿಯ ಭಾಗವಾಗಿ, ರಾಜಕೀಯ ವ್ಯವಸ್ಥೆಯೊಂದಿಗೆ ಬೆಸೆದುಕೊಳ್ಳುವ ಮತ್ತು ಮೀರುವ ಒಲವನ್ನು ರೂಪಿಸುತ್ತ ಬಂದಿದೆ. ಕನ್ನಡ ಸಾಹಿತ್ಯದ ಗಟ್ಟಿತನ, ಕನ್ನಡ ಪರಂಪರೆಯೊಳಗಿನ ನೈಜ್ಯ ಮೀಮಾಂಸೆಯು ಇಂದಿನ ಅನೇಕ ಸಾಹಿತಿಗಳಿಂದ ದೂರವಿರುವುದು ಕನ್ನಡದ ಅಸ್ಮಿತೆಯ ದುರಂತದ ಭಾಗ ವಾಗಿದೆ. ಇಂದಿನ ಅನೇಕ ಸಾಹಿತ್ಯ ಸಂಘಟನೆಗಳು, ಸಾಹಿತಿಗಳು, ಪ್ರಶಸ್ತಿಗಳು, ಸನ್ಮಾನಗಳು ರಾಜಕೀಯ ಪ್ರಜ್ಞೆಯೊಳಗೆ ಪ್ರವೇಶ ಪಡೆದಿವೆ. ಸಾಹಿತ್ಯದ ಒಲವು ರಾಜಕಾರಣದ ಒಲವಾಗಿ ಬದಲಾಗುತ್ತಿರುವುದು ಬೂಸ ಸಾಹಿತ್ಯಕ್ಕೆ ಅಧಿಕೃತವಾದ ದಾರಿಯನ್ನು ಮಾಡಿಕೊಟ್ಟಿದೆ. ನಮ್ಮ ಕನ್ನಡದ ಅನೇಕ ಸಾಹಿತಿಗಳ ಸಾಹಿತ್ಯ ಪ್ರಜ್ಞೆಯ ಅಜ್ಞಾನ ಹಾಗೂ ಪ್ರಚಾರದ ನೆಲೆಯ ಬೂಟಾಟಿಕೆಯೂ ಸಾಹಿತ್ಯ ಪರಂಪರೆ ಭ್ರಷ್ಟವಾಗಲು ಕಾರಣವಾಗಿದೆ. ಅಂದು ಕನ್ನಡ ಸಾಹಿತ್ಯದ ಅಭಿವ್ಯಕ್ತಿಯು ರಾಜಕೀಯ ಪ್ರಭುತ್ವದಲ್ಲಿ ರೂಪುಗೊಂಡರೂ ಸಾಹಿತ್ಯವೇ ರಾಜಕಾರಣ ವಾಗಿರಲಿಲ್ಲ. ರಾಜಪ್ರಭುತ್ವದಲ್ಲಿ ಸಾಹಿತ್ಯ ರಚಿಸಿದ ಪಂಪ, ರನ್ನ, ಜನ್ನ ಇತ್ಯಾದಿ ಕವಿಗಳು ಪಾಂಡಿತ್ಯವನ್ನು ಹೊಂದಿದ್ದರಲ್ಲದೆ ಹೊಸ ಹೊಸ ಪ್ರಯೋಗವನ್ನು ಕನ್ನಡ ಪರಿಸರದಲ್ಲಿ ರೂಪಿಸಿದ್ದರು. ಇವರಿಗೆ ಕಾವ್ಯವೇ ಧರ್ಮ ವಾಗಿತ್ತು. 12ನೇ ಶತಮಾನಕ್ಕಾಗುವಾಗ ರಾಜಕಾರಣವೇ ಕಾವ್ಯದ ಆಶಯವಾಗುವಂತಹ ಸ್ಥಿತಿ ನಿರ್ಮಾಣವಾಗಿ ಸಾಹಿತ್ಯ ಒಂದು ವರ್ಗದ ಸ್ವತ್ತಾಗಿ ಭ್ರಷ್ಟತೆಯನ್ನು ಗಳಿಸಿಕೊಂಡಾಗ ಶರಣರು ರಾಜಕೀಯ ವ್ಯವಸ್ಥೆಯನ್ನು ನಿರಾಕರಿಸಿ ಸೃಜಶೀಲವಾದ ಸಾಹಿತ್ಯ ಚಳುವಳಿಯನ್ನು ಹುಟ್ಟುಹಾಕಿ ಕನ್ನಡ ಸಾಹಿತ್ಯ ಪರಂಪರೆಗೆ ಮೌಲ್ಯವನ್ನು, ಅನುಭಾವ ಪ್ರಜ್ಞೆಯನ್ನು ನೀಡಿದರು. ಜಾತಿ, ಲಿಂಗ ಹಾಗೂ ವ್ಯಯುಕ್ತಿಕ ಪ್ರತಿಷ್ಠೆಯ ಸಾಹಿತ್ಯ ಅಭಿವ್ಯಕ್ತಿಯನ್ನು ಬೇರು ಸಮೇತ ಕಿತ್ತು ಎಸೆದ ಕಿರ್ತಿ ಶರಣರದ್ದು. ನೈಜ್ಯವಾದ ವೃತ್ತಿ ಹಾಗೂ ಕಲಾಪ್ರಜ್ಞೆ ಇರುವ ಎಲ್ಲರೂ ಶರಣರಾಗಿ ಸಾಹಿತ್ಯ ಚಳುವಳಿಯನ್ನು ರೂಪಿಸುವ ಮೂಲಕ ಕನ್ನಡದ ಸಾಹಿತ್ಯದ ಒಲವನ್ನು ಜೀವಪರವಾಗಿಸಿ. ಜಡ್ಡುಗಟ್ಟಿದ ಹಾಗೂ ಟೊಳ್ಳು ವಂಚಕ ಸಾಹಿತಿಗಳಿಗೆ ಚಾಟಿ ಬೀಸಿದಲ್ಲದೆ ರಾಜಕೀಯ ಪ್ರಭುತ್ವವನ್ನು ಪ್ರಶ್ನಿಸಿದ, ನಿರಾಕರಿಸಿದ ಬಗೆಯನ್ನು ನೆನಪು ಮಾಡಬಹುದು. ಆನಂತರ 18ನೇ ಶತಮಾದಲ್ಲಿ ತತ್ವಪದಕಾರರು ಕಲ್ಯಾಣ ಕರ್ನಾಟಕ ಭಾಗದಲ್ಲಿ ರಾಜಕಾರಣದಿಂದ ಸಾಹಿತ್ಯವನ್ನು ಬಿಡುಗಡೆಗೊಳಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿ ಜನಮುಖಿಯಾದ ಬಯಲು ಆಲಯವಾಗಿಸುವ ಅನುಭಾವಿ ಮೀಮಾಂಸೆಯನ್ನು ಸಾಹಿತ್ಯದ ಒಲವಾಗಿ ಸಿದ್ದು ಕನ್ನಡ ಸಾಧನೆ.

ರಾಜಪ್ರಭುತ್ವ ನಾಶವಾಗಿ ಪ್ರಜಾಪ್ರಭುತ್ವ ರೂಪು ಗೊಂಡ ಮೇಲೆ ಕನ್ನಡ ಸಾಹಿತ್ಯದ ಒಲವು ಸಾಂಸ್ಕೃತಿಕ ಪರಂಪರೆ ಯನ್ನು ಕಾಪಿಟ್ಟುಕೊಳ್ಳುವ ಹಾಗೂ ಸಾಮಾಜಿಕ ಪರಿವರ್ತನೆಯನ್ನು ತರುವ ಮೂಲಕ ಜೀವಪರವಾದ ಅಭಿವ್ಯಕ್ತಿಯನ್ನು ರೂಪಿಸುವು ದಾಗಿತ್ತು.



AI ಚಿತ್ರ

ಇಲ್ಲಿ ಸಾಮಾಜಿಕ ಹೊಣೆಗಾರಿಕೆ ಸಾಹಿತಿಯ ಅರಿವಿನ ನೆಲೆಯನ್ನು ಜಾಗ್ರತವಾಗಿಸಿತ್ತು. ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಮಾಸ್ತಿ, ಪು.ತೀ.ನ, ಡಿ.ವಿ.ಜಿ ಇನ್ನು ಹತ್ತು ಹಲವು ಕವಿಗಳು ರಾಜಕಾರಣದಿಂದ ಸಾಹಿತ್ಯವನ್ನು ಆಳಲಿಲ್ಲ. ಬದಲಿಗೆ ಸಾಹಿತ್ಯದಿಂದ ರಾಜಕಾರಣ ವನ್ನು ಆಳಿದರು. ನವೋದಯ, ನವ್ಯ, ದಲಿತ ಚಳುವಳಿಯ ಮೂಲಕ ಹುಟ್ಟಿ ಕೊಂಡ ಸಾಹಿತ್ಯದ ಒಲವು ಬಹುತೇಕ ಕವಿಗಳ ಪಾಂಡಿತ್ಯವನ್ನು ಹೆಚ್ಚಿಸಿತ್ತು. ನಾಡು-ನುಡಿ-ನಾಡವರ ಸಾಹಿತ್ಯ ಪರಂಪರೆಯನ್ನು ಉಳಿಸು ನೆಲೆಯಲ್ಲಿ ಜೀವ ಪಡೆದ ಅನೇಕ ಸಂಸ್ಥೆಗಳು ಕನ್ನಡದ ಅಸ್ಮಿತೆಯನ್ನು ತನ್ನ ಆಶಯವಾಗಿಸಿಕೊಂಡವು. ಕನ್ನಡ ಸಾಹಿತ್ಯ ಪರಿಷತ್ತು, ವಿದ್ಯಾವರ್ಧಕ ಸಂಘ, ನಾಟಕ ಮಂಡಲಿ ಇನ್ನಿತರ ಸಂಘಟನೆಗಳು ಕನ್ನಡದ ಪರಿಸರದಲ್ಲಿ ಹುಟ್ಟಿಕೊಂಡು ರಾಜಕಾರಣ ರಹಿತವಾಗಿ ಕೆಲಸ ಮಾಡಿದವು. 1980ರ ನಂತರದ ಕಾಲಮಾನದಲ್ಲಿ ಸಾಹಿತ್ಯ ಸಂಘಟನೆ ಗಳು ಸರ್ಕಾರದ ಅನುದಾನಕ್ಕೆ ಒಳಪಟ್ಟವು ಹಾಗೂ ಸರ್ಕಾರ ಕನ್ನಡ ಕೆಲಸಕ್ಕೆಂದು ಅನೇಕ ಇಲಾಖೆಯನ್ನು, ಯೋಜನೆ ಗಳನ್ನು, ಪ್ರಶಸ್ತಿಗಳನ್ನು ರೂಪಿಸಿ ಲಕ್ಷಾಂತರ ರೂಪಾಯಿ ಹಣವನ್ನು ನೀಡುವ ಮೂಲಕ ಸಾಹಿತ್ಯ ಕ್ಷೇತ್ರವನ್ನು ಭ್ರಷ್ಟವಾಗಲು ದಾರಿ ಮಾಡಿಕೊಟ್ಟಿತು. ಬಹುತೇಕ ಸಾಹಿತ್ಯ ಸಂಘಟನೆಯ, ಸಂಸ್ಥೆಯ ಪ್ರಮುಖ ಹುದ್ದೆಗಳು ಸಾಹಿತ್ಯದ ಒಲವನ್ನು ಕಾಣದ ಅದರ ಅರಿವಿನ ಸ್ಪರ್ಶ ವಿಲ್ಲದ ರಾಜಕೀಯ ಬೆಂಬಲವಿರುವ ವ್ಯಕ್ತಿಗಳ ಕೈಯಲ್ಲಿದೆ. ಪ್ರಶಸ್ತಿಗಳಂತು ನಿಜವಾಗಿ ಸಾಹಿತ್ಯ ಕೃಷಿ ಮಾಡಿದ ವ್ಯಕ್ತಿಗೆ ಸಲ್ಲದೆ ರಾಜಕೀಯ ಲಾಬಿಯಲ್ಲಿ ಇರುವ ಷೋಕಿ ಮಾಡಿ ಕೊಂಡು ಪ್ರಚಾರ ಗಿಟ್ಟಿಸಿಕೊಳ್ಳುವವರ ಮುಡಿಗೇರುತ್ತಿದೆ. ಸಾಹಿತ್ಯ ಸಮ್ಮೇಳನ, ಸಾಹಿತ್ಯಗೋಷ್ಠಿ ಇತರ ಕಾರ್ಯ ಕ್ರಮದಲ್ಲಿ ರಾಜಕಾರಣಿಗಳೇ ಮುಖ್ಯ ಭಾಷಣಕಾರರಾಗಿ, ಅತಿಥಿಗಳಾಗಿ, ಅಧ್ಯಕ್ಷರಾಗಿ, ಕವಿಗಳಾಗಿ ಆರ್ಭಟಿ ಸುತ್ತಿದ್ದಾರೆ. ನೈಜ ಬರೆಹಗಾರರು ಯಾರಿಗೂ ಅರಿವಾಗ ದಂತೆ ಓದಿ ಕೊಂಡು, ಸಂಶೋಧನೆಯನ್ನು ನಡೆಸಿಕೊಂಡು, ಪುಸ್ತಕ ಮಾರಿಕೊಂಡು, ನುಡಿಚಿತ್ರ ಕಟ್ಟಿಕೊಂಡು, ಕನ್ನಡ ಮಾತನಾಡುತ್ತ ಕನ್ನಡ ಜೀವಸತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು
Scan For Digital Colourful
HAMPI TIMES E-paper

ಇಂದು ಕನ್ನಡ ಸಾಹಿತ್ಯ ಹಾಗೂ ಬಹುತೇಕ ಸಾಹಿತಿ ಗಳೆಂದು ಹೇಳುವ ಸಾಹಿತಿಗಳ ಒಲವು ರಾಜಕೀಯವಾಗಿ ಓದು, ಬರೆಹದಂತಹ ಅಭಿವ್ಯಕಿಯೇ ದೂರವಾಗಿ ರಾಜಕೀಯ ಸಿದ್ಧಾಂತವೇ ಸಾಹಿತ್ಯ ಸಂಘಟನೆಯ ಸಿದ್ಧಾಂತವಾಗಿ ರೂಪುಗೊಳ್ಳುತ್ತಿರುವುದು ಸಾಹಿತ್ಯ ಜನ ರಿಂದ ದೂರವಾಗುವುದಕ್ಕೆ ಕಾರಣವಾಗಿದೆ. ಮುಖ್ಯವಾಗಿ ಇವೊತ್ತು ಸಮ್ಮೇಳನ, ಗೋಷ್ಠಿ, ವಿಚಾರ ಸಂಕಿರಣ ಯಾವುದೇ ಸಾಹಿತ್ಯದ ಪರಿಧಿಯನ್ನು ಬಿಂಬಿಸುವ ಒಂದು ಕಾರ್ಯಕ್ರಮವನ್ನು ರೂಪಿಸಿದರೆ ಅದರಲ್ಲಿ ಪೂರ್ಣ ಮನಸ್ಸಿನಿಂದ ಊರಿನ ಜನರೆಲ್ಲ ಭಾಗಿಯಾಗು ವುದಿಲ್ಲ, ಹತ್ತೋ, ಇಪ್ಪತ್ತೋ ಜನ ಬಿಟ್ಟರೇ ನೂರಾರು ಖಾಲಿ ಕುರ್ಚಿಗಳಿಗೆ ಒಂದು ಗಂಟೆಯ ಭಾಷಣವನ್ನು ಹತ್ತು ನಿಮಿಷಕ್ಕೆ ಮುಗಿಸಿ ಕೈತೊಳೆದುಕೊಳ್ಳಬೇಕಾದ ಅನಿವಾರ್ಯತೆ ಚಿಂತಕರಿಗೆ ಒದಗಿದೆ. ನೀವು ಸಭಿಕರ ಬಗ್ಗೆ ತಲೆ ಬಿಸಿ ಮಾಡಬೇಡಿ, ನಿಮ್ಮ ಮಾತು ಟಿವಿಯಲ್ಲಿ, ಯುಟೂಬ್‌ನಲ್ಲಿ ಲೈವ್ ಹೋಗುತಿದೆ. ದೇಶ, ವಿದೇಶದ ಸಾವಿರಾರು ಜನ ನೋಡುತ್ತಿದ್ದಾರೆ ಅಂಬೋ ಸಂಘಟಕರ ಮಾತು ಇಂದು ಸಾಮಾನ್ಯವಾಗಿದೆ. ಮಾತನಾಡಲು ಬೇಕಾದ ಮೀಮಾಂಸೆಯನ್ನು ಹುಡುಕಿಕೊಂಡು ಸಿದ್ಧತೆ ಮಾಡಿಕೊಂಡು ಬಂದ ಅದೆಷ್ಟೋ ವಿದ್ವಾಂಸರಿಗೆ ತನ್ನ ವಿಚಾರವನ್ನು ಮಂಡಿಸುವುದಕ್ಕೆ ಸಮಯ ಹಾಗೂ ಕೇಳುವ ಮನಸ್ಸುಗಳಿಲ್ಲದೇ ಸುಮ್ಮನೆ ಹರಕೆ ತೀರಿಸಿದ ಹಾಗೆ ಬರೆದುಕೊಂಡು ಬಂದಿದ್ದನ್ನು ಉಸಿರು ಬಿಡದೆ ಓದಿ ಮುಗಿಸುವುದು ಬಹು ಕಡೆಯಲ್ಲಿ ಕಾಣುತ್ತಿದ್ದೇವೆ. ಇದು ಒಂದು ತರವಾದರೆ. ಬರೆಹದ್ದು ಇನ್ನೊಂದು ರೂಪ. ಶ್ರಮವಹಿಸಿ ಕತೆ, ಕಾದಂಬರಿ, ಲೇಖನ, ಸಂಶೋಧನೆ ಇತ್ಯಾದಿ ಬರಹವನ್ನು ಬರೆದರೆ ಅದು ಹೆಚ್ಚಿನದ್ದಾಗಿ ಜಾತಿ, ಧರ್ಮ, ಲಿಂಗ ಮತ್ತು ಪ್ರಭಾವದ ನೆಲೆಯಲ್ಲಿ ಅದರ ಮೌಲ್ಯಗಳು ನಿರ್ಧಾರವಾಗುತಿದೆ. ಬಹುತೇಕ ಹಿರಿಯ ಚಿಂತಕರು ಯುವ ಬರೆಹಗಾರರ ಕೃತಿಗಳನ್ನು ಓದದೆಯೇ 'ಅಮೂಲ್ಯವಾದ ಕೃತಿ' ಅನ್ನೋ ಹೇಳಿಕೆ ಕೊಡುವುದು, ತನ್ನ ಜಾತಿ, ಪಂಥ, ರಾಜಕೀಯ ಪಕ್ಷದ ವ್ಯಕ್ತಿ ಅಲ್ಲ ಅಂಬೋ ಕಾರಣಕ್ಕೆ ಕೃತಿಯ ಮೌಲ್ಯದ ಬಗೆಗೆ ಮೌನವಾಗಿ ಲಕ್ಷ್ಯವಿಲ್ಲದಂತೆ ವರ್ತಿಸುವುದು ಇತ್ಯಾದಿ ಸಾಮಾನ್ಯವಾದ ಚಟುವಟಿಕೆಗಳಾಗಿದೆ. ಈ ರೀತಿ ನಡೆ ಸಾಹಿತ್ಯ ಧೋರಣೆಯನ್ನು ಮತ್ತು ಗುಣಾತ್ಮಕತೆಯನ್ನು ಕಳೆಯುವಂತೆ ಮಾಡಿದೆ. ರಾಜಕೀಯ ಪ್ರಭುತ್ವ ಸಾಹಿತ್ಯ ಅಭಿವ್ಯಕ್ತಿಯ ಕ್ರಮದ ಒಳಗೆ ಪ್ರವೇಶ ಮಾಡದೆ ಪ್ರಾಮಾಣಿ ಕತೆಯ ದಾರಿಯಲ್ಲಿ ನಡೆಯಬೇಕಾಗಿದೆ. ನೈಜ್ಯ ಓದುಗ, ಬರೆಹಗಾರ, ಸಾಹಿತಿ ಅನ್ನುವ ಜನರೆಲ್ಲ ರಾಜಕೀಯ ಪ್ರಭುತ್ವವನ್ನು ಮೀರಿ ಸಾಹಿತ್ಯದ ತಾತ್ವಿಕತೆಯನ್ನು ಕಟ್ಟುವ ಚಳುವಳಿಯನ್ನು ಹುಟ್ಟು ಹಾಕಬೇಕಾದ ಅನಿವಾರ್ಯತೆ ಇದೆ.

# ಮಾನವತೆಯಿಂದ ದೇವತ್ವದೆಡೆಗೆ.... ಬುದ್ಧನ ಮಹಾಯಾನ


ಆತ ಹುಟ್ಟಿದ್ದು ರಾಜವಂಶದಲ್ಲಿ. ಕೋಸಲ ರಾಜ್ಯವನ್ನು ಆಳುತ್ತಿದ್ದ ಶಾಖ್ಯ ವಂಶದ ಮಹಾರಾಜ ಶುದ್ಧೋದನ ಆತನ ತಂದೆ, ತಾಯಿ ಮಾಯಾದೇವಿ. ಈತನ ಮೂಲ ಹೆಸರು ಸಿದ್ಧಾರ್ಥ ಗೌತಮ. ರಾಜ ಮನೆತನದಲ್ಲಿ ಹುಟ್ಟಿದ ಸಿದ್ಧಾರ್ಥನ ಜಾತಕವನ್ನು ಪರಿಶೀಲಿಸಿದ ರಾಜ ಪುರೋಹಿತರು ಈತ ಮುಂದೆ ಸರ್ವ ಸಂಗ ಪರಿತ್ಯಾಗಿಯಾಗಿ ಜಗದೋದ್ಧಾರಕನಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿರುವನು ಎಂದು ಹೇಳಿದರು. ಇದರಿಂದ ಚಿಂತಿತನಾದ ರಾಜನು ತನ್ನ ಮಗನಿಗೆ ಯಾವುದೇ ರೀತಿಯ ನೋವು ಸಂಕಟಗಳ ದೃಶ್ಯಾವಳಿಗಳು ಕಣ್ಣಿಗೆ ಬೀಳದಂತೆ ಅರಮನೆಯ ಚಿನ್ನದ ಪಂಜರದಲ್ಲಿ ಸುಖದ ಸುಪ್ಪತ್ತಿಗೆಯ ಮೇಲೆ ಬೆಳೆಸಿದನು. ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿದನು. ಪ್ರಾಪ್ತ ವಯಸ್ಕನಾದಾಗ ಯಶೋಧರೆ ಎಂಬ ಕನ್ಯಾಮಣಿಯೊಂದಿಗೆ ವಿವಾಹವನ್ನು ಮಾಡಿದನು. ಆತನ ದಾಂಪತ್ಯದ ಫಲವಾಗಿ ಓರ್ವ ಪುತ್ರ ರಾಹುಲನನ್ನು ಪಡೆದನು. ಇಷ್ಟಕ್ಕೆ ಮುಗಿಯಲಿಲ್ಲ ಆತನ ಜೀವನ ಯಾನ.... ಇಲ್ಲಿಂದ ಆರಂಭವಾಯಿತು ಬುದ್ಧನ ಮಹಾ... ಗಮನ.

ಎಷ್ಟೇ ಅರಮನೆಯ ಕಣ್ಕಾವಲಿನಲ್ಲಿ ಮಗನನ್ನು ಮಹಾರಾಜನು ಬೆಳೆಸಿ ದರೂ ಒಂದು ದಿನ ರಥದಲ್ಲಿ ಕುಳಿತು ಪ್ರಯಾಣಿಸುವಾಗ ರಾಜಕುಮಾರ ಸಿದ್ಧಾರ್ಥನು ಓರ್ವ ಅತ್ಯಂತ ಕ್ಷೀಣಿಸಿದ ವೃದ್ಧನನ್ನು, ಓರ್ವ ರೋಗಿ ಯನ್ನು ಮತ್ತು ಒಂದು ಶವಯಾತ್ರೆ ಯನ್ನು ಕಂಡು ಅವರ್ಯಾರೆಂದು ತನ್ನ ಸಾರಥಿ ಚೆನ್ನನನ್ನು ಕೇಳಿದನು. ಅವರ ಕುರಿತು ಸಾರಥಿ ಚೆನ್ನ ನೀಡಿದ ವಿವರಣೆಯಿಂದ ವಿಚಲಿತನಾದ ಜನನ ಮರಣಗಳ ಚಕ್ರದ ಕುರಿತು ತನಗಿದ್ದ ಸಂದೇಹಗಳನ್ನು ಓರ್ವ ಸನ್ಯಾಸಿಯೊಂದಿಗೆ ಮಾತನಾಡಿ ಬಗೆಹರಿಸಿಕೊಂಡನು.
ಯಾನದ ಪ್ರಥಮ ಪಾದ....ಜರಾ ಮರಣ ಮತ್ತು ದುಃಖಗಳ ಕಾರಣವನ್ನು ಹುಡುಕಲು ನಟ್ಟಿರುಳಿನಲಿ ಅರಮನೆಯನ್ನು ತೊರೆದ ಗೌತಮನು ತಪೋವನಕ್ಕೆ ಬಂದು ಅಲ್ಲಿನ ಸಾಧಕರ ಬಳಿ ತಪೋವನದ ನಿಯಮಗಳನ್ನು ಅರಿತು ಮಗಧ ದೇಶದೆಡೆಗೆ ಪಯಣ ಬೆಳೆಸಿದ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ಯಾನದ ದ್ವಿತೀಯ ಪಾದ... ಕಾಡು ಮೇಡನ್ನದೆ ಬರಿಗಾಲಿನಲ್ಲಿ ನಡೆದ ಗೌತಮ, ಹಸಿವಾದಾಗ ಭಿಕ್ಷಾನ್ನಗಳಿಗೆ ಕೈಯೊಡ್ಡಿದ. ರಾಜಗೃಹವನ್ನು ತೊರೆದಾಗ 29ರ ಹರೆಯದವನಾದ ಗೌತಮನು ಸತತವಾಗಿ ಸಾಧನೆಯ ಹಾದಿಯಲ್ಲಿ ಸಾಗಿ ಅಷ್ಟಕ್ಕೂ ತೃಪ್ತನಾಗದೆ ನಿರಾಹಾರ, ಕಾಯಕ್ಲೇಶಗಳಲ್ಲಿ ತೊಡಗಿ ತನು ಮನವನ್ನು ದಂಡಿಸಿ ಇದಾವುದೂ ಸಾಧನೆಗೆ ಸಹಾಯಕವಲ್ಲ ಎಂಬುದನ್ನು ಅರಿತನು.



ಯಾನದ ಮೂರನೆಯ ಪಾದ... ಬೋಧಿವೃಕ್ಷದ ಕೆಳಗೆ ಪದ್ಮಾಸನ ಹಾಕಿ ಕುಳಿತ ಗೌತಮನಿಗೆ ವೈಶಾಖ ಹುಣ್ಣಿಮೆಯ ದಿನ ಸಂಕಲ್ಪ ಸಿದ್ಧಿಯಾಯಿತು. ಸೂರ್ಯೋದಯವಾಗುವುದರೊಳಗೆ ಸಿದ್ಧಾರ್ಥ ನಾಲ್ಕುಜಾವದ ಅನುಭವ ಪಡೆದು ಜ್ಞಾನಯೋಗಿಯಾದನು. ಬುದ್ಧನಾದನು. ಬುದ್ಧ ಎಂದರೆ 'ಜ್ಞಾನದ ಬೆಳಕು' ಎಂದರ್ಥ ಆ ನಾಲ್ಕು ಜಾವದಲ್ಲಿನ ಅನುಭವಗಳೆಂದರೆ-
ಜನ್ಮಾಂತರಗಳ ಅರಿಯುವಿಕೆ,
ನಿತ್ಯಾನಿತ್ಯ ವಸ್ತುಗಳ ವಿವೇಕೋದಯ,
ಜರಾಮರಣಗಳ ದುಃಖಕ್ಕೆ ಕ್ಷಣಿಕ ವಸ್ತುಗಳ ತೃಷೆಯೇ ಕಾರಣ,
ಆಧ್ಯಾತ್ಮ ತತ್ವದ ಸಾಕ್ಷಾತ್ಕಾರ.
ಇದುವೇ ಆತನ ಜೀವನದ .....ಮಹಾ ಗಮನ.
ಸಾಧನೆಯ ನಾಲ್ಕನೇ ಮಹಾಪಾದ...

ಬುದ್ಧನ ಸಹನೆ, ಕರುಣೆ ಮತ್ತು ಪ್ರೀತಿಯುತ ಮಾತುಗಳು ಜನರನ್ನು ಬದಲಾಯಿಸಿದವು. ಬುದ್ಧ ಸ್ವತಃ ತನ್ನ ಜೀವನದಲ್ಲಿ ತಾನು ಹೇಳುತ್ತಿದ್ದ ಎಲ್ಲವನ್ನೂ ಅಳವಡಿಸಿಕೊಂಡನು. ಹಸಿದು ಬಂದ ಮಕ್ಕಳಿಗೆ ಊಟ ಕೊಡದೆ ಮಕ್ಕಳಿಗಾಗಿ ಹಂಬಲಿಸಿದ ಮಹಿಳೆಗೆ ತಿಳಿಸಿ ಬುದ್ಧಿ ಹೇಳಿದ ಬುದ್ಧ, ತನ್ನ ಪುಟ್ಟ ಕಂದನನ್ನು ಕಳೆದುಕೊಂಡ ತಾಯಿಗೆ ಸಾವಿಲ್ಲದ ಮನೆಯ ಸಾಸಿವೆ ತರಲು ಹೇಳಿದ ಬುದ್ಧ, ಬೇಟೆಗಾರನಿಂದ ಗಾಯಗೊಂಡ ಹಂಸವನ್ನು ಸಂರಕ್ಷಿಸಿದ ಬುದ್ಧ, ಕಡು ಕ್ರೂರಿ ಅಂಗುಲಿಮಾಲನ ಪರಿವರ್ತಿಸಿದ ಮಹಾ ಜ್ಞಾನಿ ಬುದ್ಧ, ತನ್ನ ಮೇಲೆ ಅತ್ಯಾಚಾರ ಆರೋಪ ಹೊರಿಸಿದ ಮಹಿಳೆಗೆ ಜ್ಞಾನೋದಯವನ್ನುಂಟು ಮಾಡಿದ ಬುದ್ಧ, ಪ್ರಾಣಿ ಹಿಂಸೆ, ನರಬಲಿ, ಸಾಮ್ರಾಜ್ಯ ವಿಸ್ತರಣೆಯ ದಾಹಗಳನ್ನು ನಿವಾರಿಸಿದ ಬುದ್ಧ.....ಹೀಗೆ ಪಾರಸ ಮಣಿ ಸೋಕಿದ ಎಲ್ಲವೂ ಚಿನ್ನವಾಗುವಂತೆ ಬುದ್ಧನ ಪ್ರವಚನಗಳನ್ನು ಆಲಿಸಿದ ಜನರು ತಮ್ಮ ಅಜ್ಞಾನ, ವಿಸ್ಮೃತಿ, ಮೌಢ್ಯಗಳನ್ನು ಕಳೆದುಕೊಂಡು ಶಾಂತಿ, ಸಹನೆ, ಸಹಬಾಳ್ವೆ, ಸಹೋದರತ್ವ ಭಾವಗಳನ್ನು ತಮ್ಮದಾಗಿಸಿಕೊಂಡರು.

ಜೀವನ ಯಶಸ್ವಿಯಾಗಿ ಸಾಕಾರಗೆಣಟಿಜಜಜಿಟಿಜಜಳ್ಳಬೇಕಾದರೆ ಎಂಟು ಸನ್ಮಾರ್ಗಗಳಾದ ಸದ್ಭಾವನೆ, ಸತ್ಸಂಕಲ್ಪ, ಸದ್ವಚನ, ಸದ್ವರ್ತನೆ, ಸತ್‌ಶುದ್ಧಿ, ಸದಾಲೋಚನೆ, ಸದಾಂತರ್ಯ ಮತ್ತು ಸದಾಮೋದ ಎಂಬ ಎಂಟು ಸನ್ಮಾರ್ಗಗಳ ಪಾಲಿಸುವಂತೆ ಹೇಳಿರುವ ಬುದ್ಧ ಈ ಮೂಲಕ ಜೀವನದ ಯಶಸ್ಸಿನ ಮೆಟ್ಟಿಲುಗಳನ್ನು ಸುಲಭವಾಗಿ ಹತ್ತಬಹುದು ಎನ್ನುತ್ತಾನೆ.


ನಾವು ನಡೆಯುವ ದಾರಿ ಸರಿಯಾಗಿದ್ದರೆ, ನಾವು ಮಾಡುವ ಕಾರ್ಯ ಸತ್ಯ ಶುದ್ಧವಾಗಿದ್ದರೆ ಸಾಧನೆಯ ಶಿಖರವೇರಲು ನಮಗೆ ಯಾವುದೇ ಅಡೆತಡೆಗಳು ಉಂಟಾಗಲಾರದು ಎಂಬುದು ಬುದ್ಧನ ಬೋಧನೆಯ ಸಾರ. ಅಹಿಂಸೆಯನ್ನು ಪ್ರತಿಪಾದಿಸಿದ ಬುದ್ಧ ದಾನ ಮಾಡುವುದು, ಸತ್ಯ ಬೋಧನೆ, ಮದ್ಯಪಾನ ಮಾಡದಿರುವುದು ಹಾಗೂ ಶೀಲವಂತರಾಗಿ ಬದುಕುವಂತೆ ಕರೆ ನೀಡಿದನು. ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಈ ಪಂಚಶೀಲಗಳನ್ನು ಅಳವಡಿಸಿಕೊಂಡರೆ ಈ ಸಮಾಜ ಸುಖ, ಶಾಂತಿ, ನೆಮ್ಮದಿಯಿಂದ ಇರಲು ಸಾಧ್ಯವಿದೆ ಎನ್ನುತ್ತಾನೆ.

ಬುದ್ಧ ಓರ್ವ ಐತಿಹಾಸಿಕ ಪುರುಷ. ಇಂದಿನ ನೇಪಾಳ ದೇಶದಲ್ಲಿರುವ ಲುಂಬಿನಿವನದಲ್ಲಿ ಜನಿಸಿ, ಬುದ್ಧ ಗಯಾ ಎಂದು ಹೆಸರಾದ ಗಯಾದಲ್ಲಿ ಜ್ಞಾನೋದಯ ಪಡೆದು ಸಾರಾನಾಥದಲ್ಲಿ ಮೊದಲ ಪ್ರವಚನ ನೀಡಿದನು.

ಬುದ್ಧನಿಗೆ ಜ್ಞಾನೋದಯವಾದ ದಿನ, ಹುಟ್ಟಿದ ದಿನ ಹಾಗೂ ನಿರ್ವಾಣ ಹೊಂದಿದ ದಿನವನ್ನು ಭಾರತಾದ್ಯಂತ 'ಬುದ್ಧ ಪೂರ್ಣಿಮಾ' ಎಂದು ಆಚರಿಸಲಾಗುತ್ತದೆ. ಇದನ್ನು ಕೆಲವು ದೇಶಗಳ ಬುದ್ಧನ ಅನುಯಾಯಿಗಳು ಈ ದಿನವನ್ನು ವೆಸಕ ಎಂದು ಕರೆಯುತ್ತಾರೆ. ವೆಸೆಕ ಎಂದರೆ ಏಪ್ರಿಲ್- ಮೇ ತಿಂಗಳ ಪವಿತ್ರ ದಿನ ಎಂದರ್ಥ.

ಹೀಗೆ ಬುದ್ದ ಮನುಷ್ಯನಾಗಿ ಹುಟ್ಟಿ ತನ್ನ ಆಂತರಿಕ ಯೋಚನೆಗಳಿಂದ ಜೀವನದ ಒಂದೊಂದೇ ಮೆಟ್ಟಿಲುಗಳನ್ನು ಅತ್ಯಂತ ಧ್ಯಾನಪೂರ್ವಕವಾಗಿ ಕೆತ್ತಿ... ಮಾನವತೆಯಿಂದ ದೈವತ್ವದೆಡೆಗೆ ಸಾಗಿದ್ದಾನೆ ಇಂದು ಜಗತ್ತಿನಲ್ಲಿ ಸಹಸ್ರಾರು ವರ್ಷಗಳ ಹಿಂದೆ ಬುದ್ಧನು ನೀಡಿದ ಸಂದೇಶಗಳೇ ಇಂದಿಗೂ ಪಸರಿಸಿವೆ. ಬುದ್ಧನ ಜೀವನವೇ ಸಂದೇಶವಾಗಿ ಪರಿಣಮಿಸಿದೆ.... ಬುದ್ಧನು ಸಾರಿದ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ವಿಶ್ವ ಬಂಧುತ್ವದ ನೆಲೆಯಲ್ಲಿ ಬಾಳಿ ಬದುಕೋಣ ... ಓಂ ನಮೋ ಬುದ್ಧಾಯ.



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 12–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.02 ಅಡಿ |
| ಒಳ ಹರಿವು | 1429 ಕ್ಯುಸೆಕ್ |
| ಹೊರ ಹರಿವು | 284ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.010 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.64 ಅಡಿ |
| ಒಳ ಹರಿವು | 41 ಕ್ಯುಸೆಕ್ |
| ಹೊರ ಹರಿವು | 13 ಕ್ಯುಸೆಕ್ |
| ಸಾಮರ್ಥ್ಯ | 3.431 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

13–05–2025 – ಮಂಗಳವಾರ

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ವಿಶಾಖ |
| ಯೋಗ | : ವರಿಯಾಣ |
| ಕರಣ | : ಬಾಳವ |
| ಸೂರ್ಯೋದಯ | : 05:47:58 |
| ಸೂರ್ಯಾಸ್ತ | : 18:58:52 |
| ರಾಹು ಕಾಲ | : 15:41–17:20 |
| ಯಮಘಂಡ ಕಾಲ | : 09:06–10:45 |
| ಗುಳಿಕ ಕಾಲ | : 12:23–10:02 |

# ಉದ್ಯೋಗಕ್ಕೆ ಪದವಿ ಜೊತೆ ಕೌಶಲ್ಯ ಮುಖ್ಯ

## ಸಿಇಓ ಶಿವಾನಂದ ಡಿ.ವಿ ಅಭಿಮತ । ಪಿಡಿಐಟಿಯಲ್ಲಿ ವಿದ್ಯುತ್ ವಿಭಾಗದಿಂದ ಕಾರ್ಯಾಗಾರ

**ಹಂಪಿ ಟೈಮ್ಸ್ ಹೊಸಪೇಟೆ**

ಕೇವಲ ಪದವಿ ಗಳಿಸುವುದೊಂದೇ ಮಹತ್ವವಲ್ಲ ವಿದ್ಯಾರ್ಥಿಗಳು ಪ್ರಯೋಗಿಕವಾಗಿ ಕೌಶಲ್ಯ ಬೆಳೆಸಿ ಕೊಳ್ಳುವುದು ಮುಖ್ಯ ಎಂದು ತುಮಕೂರಿನ ಡಿಬಿಸನ್ಸ್ ಎಲೆಕ್ಟ್ರಿಕಲ್ ಕಂಟ್ರೋಲ್ ಪಾನೆಲ್ಸ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯ ಸಿಇಓ ಶಿವಾನಂದ ಡಿ.ವಿ ಅಭಿಪ್ರಾಯಪಟ್ಟರು. ನಗರದ ಪ್ರೌಢದೇವರಾಯ ತಾಂತ್ರಿಕ ಮಹಾ ವಿದ್ಯಾಲಯ ವಿದ್ಯುತ್ ವಿಭಾಗದ ವತಿಯಿಂದ ಐಕ್ಯೂಎಸಿಯ ಸಹಯೋಗದಲ್ಲಿ "ಎಲೆಕ್ಟ್ರಿಕಲ್ ಸ್ವಿಚ್‌ಗೇರ್‌ನ ಸುರಕ್ಷತೆ, ರಕ್ಷಣೆ ಮತ್ತು ಅನ್ವಯಿಕೆಗಳು" ಎಂಬ ಕೌಶಲ್ಯಾಭಿವೃದ್ಧಿ ಐದು ದಿನದ ಕಾರ್ಯಾಗಾರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು.

ಸ್ನಾತಕೋತ್ತರ ಪದವಿ ಹಾಗೂ ಇಂಜಿನಿಯರಿಂಗ್ ಡಾಕ್ಟರೇಟ್‌ಗಳಿಸಿದ್ದರೂ ಇಂದಿನ ಎಲೆಕ್ಟ್ರಿಕಲ್ ಇಂಜಿನಿಯರ್‌ಗಳಿಗೆ ಮನೆಯಲ್ಲಿ ಕೆಟ್ಟುಹೋದ ಮೋಟಾರ್ ಅನ್ನು ಸರಿಪಡಿಸಲು ಬರುವುದಿಲ್ಲ, ಇಂತಹ ಇಂಜಿನಿಯರ್‌ಗಳು ಕೈಗಾರಿಕಾ ಉದ್ಯಮ ಗಳಲ್ಲಿ ಕೌಶಲ್ಯದ ಕೊರತೆಯಿಂದ ಉದ್ಯೋಗಗಳಿಂದ ವಂಚಿತರಾ ಗುತ್ತಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಶಿಕ್ಷಣ ಕ್ಷೇತ್ರ ಮತ್ತು ಕೈಗಾರಿಕೆ ನಡುವಿನ ಅಂತರವನ್ನು ಸರಿದೂಗಿಸಲು ಇಂತಹ ತರಬೇತಿಗಳು ಪಠ್ಯದಲ್ಲಿ ಸೇರ್ಪಡೆಯಾಗಬೇಕು ಎಂದು ಹೇಳಿದರು.ಕೈಗಾರಿಕಾವಲಯದಲ್ಲಿಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಯಾವುದಾದರೂ ಉಪಕರಣಗಳು ಸುರಕ್ಷತೆ ವಿಫಲವಾಗಿ ಕೆಟ್ಟರೆ ಇಂಜಿನಿಯರ್‌ಗಳು ನೂರಾರು ಪ್ರಶ್ನೆಗಳಿಗೆ ಗುರಿ ಯಾಗುತ್ತಾರೆ. ಅದನ್ನೆಲ್ಲಾ ಸರಿಪಡಿಸಲು ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕೌಶಲ್ಯ ಅಭಿವೃದ್ಧಿಯನ್ನು ಹೊಂದಿ ದ್ದರೆ ಕೈಗಾರಿಕಾ ಸವಾಲುಗಳನ್ನು ಎದುರಿಸಲು ಇಂತಹ ತರಬೇತಿಗಳು ಸಹಾಯಕವಾಗಲಿವೆ ಎಂದು ತಿಳಿಸಿದರು . ಪಿ.ಡಿ.ಐ.ಟಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಯು.ಎಂ.ರೋಹಿತ್ ಮಾತನಾಡಿ, ವಿದ್ಯಾರ್ಥಿಗಳು ತರಬೇತಿ ಗಳ ಪ್ರಯೋಜನಪಡೆದು ತಮ್ಮ ಮಿನಿ ಪ್ರಾಜೆಕ್ಟ್ ಹಾಗೂ ಇಂಜಿನಿಯರಿಂಗ್ ಪ್ರಾಜೆಕ್ಟ್‌ಗಳನ್ನು ತಾವೇ ತಯಾರಿಸಲು ಸಿದ್ಧರಾಗಬೇಕು ಎಂದರು.

ವಿದ್ಯುತ್ ವಿಭಾಗದ ಮುಖ್ಯಸ್ಥ ಡಾ.ಎಸ್ ಪ್ರಕಾಶ್ ಮಾತನಾಡಿ, ಕೌಶಲ್ಯಭರಿತ ವ್ಯಕ್ತಿ ಜಾಗತಿಕ ಮಟ್ಟದಲ್ಲಿ ಎಲ್ಲಿಯಾದರೂ ಬದುಕಬಲ್ಲ. ಎಲೆಕ್ಟ್ರಿಕಲ್ ವೈಕಲ್ ಟೆಕ್ನಾಲಜಿ ಮತ್ತು ಡಿಸೈನ್, ಸೋಲಾರ್ ಪ್ಯಾನಲ್ಸ್ ಮುಂತಾದ ಕ್ಷೇತ್ರದಲ್ಲಿ ಸಂಶೋಧನೆಗಳು ಇಂದಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳಿವೆ. ಡಿಬಿಸನ್ಸ್ ಕಂಪನಿಯ ಜೊತೆ ನಾವು ಒಡಂಬಡಿಕೆಯನ್ನು ಮಾಡಿಕೊಂಡು ಇಂತಹ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇವೆ ಎಂದು ಹೇಳಿದರು. ಕಾರ್ಯಕ್ರಮದ ಸಂಚಾಲಕ ಪ್ರೊ.ಮಧ್ವರಾಜ್.ಕೆ ಮಾತನಾಡಿ, ವಿದ್ಯುತ್ ಉತ್ಪಾದನೆ ಎಂಬುದು ಆಹಾರ ತಯಾರಿಕೆ ಇದ್ದಂತೆ, ಆಹಾರವನ್ನು ಅಗತ್ಯಕ್ಕಿಂತ ಹೆಚ್ಚಿಗೆ ತಯಾರಿಸಿದರೆ ಅದು ವ್ಯರ್ಥವಾಗುತ್ತದೆ, ಕಡಿಮೆ ತಯಾರಿಸಿದರೆ ಸಾಕಾಗುವುದಿಲ್ಲ, ಅಧಿಕವಾಗಿ ತಯಾರಿಸಿದ ಆಹಾರವನ್ನು ದೀರ್ಘಕಾಲ ಶೇಖರಿಸಲು ಸಾಧ್ಯವಿಲ್ಲ ಅದೇ ರೀತಿ ವಿದ್ಯುತ್ ಅನ್ನು ಬೇಡಿಕೆಗೆ ಎಷ್ಟು ಅಗತ್ಯವಿದೆಯೋ ಅಷ್ಟೇ ತಯಾರಿಸ ಬೇಕಾಗುತ್ತದೆ ಅಗತ್ಯಕ್ಕಿಂತ ಹೆಚ್ಚಿಗೆ ಉತ್ಪಾದಿಸಿದರೆ ಅದನ್ನು ದೀರ್ಘಕಾಲ ಶೇಖರಿಸಲು ಆಗುವುದಿಲ್ಲ ಹಾಗೂ ಕಡಿಮೆ ಉತ್ಪಾದಿಸಿದರೆ ಬೇಡಿಕೆಯನ್ನು ಪೂರೈಸಲು ಸಾಧ್ಯವಿಲ್ಲ, ಆದ ಕಾರಣ ವಿದ್ಯುತ್‌ನ ಉತ್ಪಾದನೆ ಮತ್ತು ಬೇಡಿಕೆಗಳನ್ನು ಏಕ ಕಾಲದಲ್ಲಿ ಸರಿದೂಗಬೇಕು ಎಂದು ಉದಾಹರಣೆ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿಗಳಾದ ಬಸವೇಶ ಶೆಟ್ಟಿ. ಎಸ್ ತರಬೇತಿ ನೀಡಿದರು. ಉಪಪ್ರಾಂಶು ಪಾಲರಾದ ಡಾ.ಪಾರ್ವತಿ ಕಡ್ಲಿ, ಪ್ರೊ.ಸುಮಾ ಜಿ.ಸಿ, ಡೀನ್ ಡಾ.ಮಂಜುಳಾ ಎಸ್.ಡಿ, ವಿವಿಧ ವಿಭಾಗದ ಮುಖ್ಯಸ್ಥರು, ಸಿಬ್ಬಂದಿ ವರ್ಗ ಹಾಗೂ ವಿದ್ಯುತ್ ವಿಭಾಗದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪ್ರೊ.ಫಿರದೋಶ್, ಪ್ರೊ.ಸ್ವಪ್ನ. ಕು.ಭಾಸ್ಕರ್, ಪ್ರೊ. ಮಧ್ವರಾಜ್, ಪ್ರೊ. ಸುಮಾ ಜಿ.ಸಿ ನಿರ್ವಹಿಸಿದರು.



> ವಿದ್ಯಾರ್ಥಿಗಳ ಪ್ರಗತಿಗಾಗಿ ಆಡಳಿತ ಮಂಡಳಿ ವತಿಯಿಂದ ಎಲ್ಲಾ ಸಹಕಾರವನ್ನು ಒದಗಿಸುತ್ತೇವೆ. ವಿದ್ಯಾರ್ಥಿಗಳು ಕಲಿಕಾವಧಿಯಲ್ಲಿ ಕೌಶಲ್ಯ ಹೆಚ್ಚಿಸಿಕೊಂಡು ಉದ್ಯೋಗ ಪಡೆಯಬೇಕು.
>
> – **ಕಲ್ಲುಗಡಿ ಮಂಜುನಾಥ್**
> ಅಧ್ಯಕ್ಷರು,
> ಪಿ.ಡಿ.ಐ.ಟಿ ಕಾಲೇಜಿನ ಆಡಳಿತ ಮಂಡಳಿ

# ಮುಂಗಾರು ಹಂಗಾಮು ಪ್ರಾರಂಭ ರೈತರು ಮಾಗಿ ಉಳುಮೆ ಅನುಸರಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಮುಂಗಾರು ಹಂಗಾಮು ಪ್ರಾರಂಭವಾಗುತ್ತಿರುವುದರಿಂದ ರೈತರು ತಮ್ಮ ಜಮೀನಿನಲ್ಲಿ ಮಾಗಿ ಉಳುಮೆ ಮಾಡಿಕೊಂಡು, ಸಾಕಷ್ಟು ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರ, ಎರೆಹುಳ ಗೊಬ್ಬರ ಮತ್ತು ಸಾವಯವ ಗೊಬ್ಬರಗಳನ್ನು ತಮ್ಮ ಜಮೀನುಗಳಿಗೆ ಸೇರಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಅವರು ತಿಳಿಸಿದ್ದಾರೆ.

ಮಾಗಿ ಉಳುಮೆ ಎಂದರೆ ಎಂ.ಬಿ.ನೇಗಿಲು, ಡಿಸ್ಕ್ ಪ್ಲೋ ಅಂತಹ ಯಂತ್ರೋಪಕರಣಗಳನ್ನು ಬಳಸಿ, ಇಳಿಜಾರಿನ ಅಡ್ಡಕ್ಕೆ ಹೊಲವನ್ನು ಆಳವಾದ ಉಳುಮೆ, ಮಣ್ಣಿನ ಹೊರಪದರವನ್ನು ತೆರೆದು ಸೂರ್ಯನ ಕಿರಣಗಳಿಂದ ಸೋಂಕುರಹಿತ ಗೊಳಿಸಲು ಕೆಳಗಿನ ಮಣ್ಣನ್ನು ತಿರುಗಿಸುವುದಾಗಿದೆ ಎಂದು ಅವರು ತಿಳಿಸಿದ್ದಾರೆ.

**ಮಾಗಿ ಉಳುಮೆಯಿಂದಾಗುವ ಪ್ರಯೋಜನಗಳು:**

ಮಾಗಿ ಉಳುಮೆಯಿಂದ ಮಣ್ಣಿನ ಗಟ್ಟಿಯಾದ ಹೊರಪದರವನ್ನು ಒಡೆದು ಆಳವಾದ ಉಳುಮೆ ಮಾಡುವುದರಿಂದ ನೀರಿನ ಇಂಗುವ ಸಾಮರ್ಥ್ಯ ಹೆಚ್ಚಾಗುತ್ತದೆ. ಮಣ್ಣು ಹೆಚ್ಚಿನ ನೀರನ್ನು ಹಿಡಿದುಕೊಂಡು ಸುಲಭವಾಗಿ ಗಿಡಗಳಿಗೆ ದೊರೆಯುವಂತೆ ಮಾಡುತ್ತದೆ.

ಮಾಗಿ ಉಳುಮೆಯಲ್ಲಿ ಪರ್ಯಾಯ ಬಿಸಿಲಿನಿಂದ ಒಣಗಿಸುವಿಕೆ ಹಾಗೂ ಗಾಳಿಯಿಂದ ತಂಪಾಗಿಸುವಿಕೆಯಿಂದಾಗಿ ಮಣ್ಣಿನ ರಚನೆಯು ಸುಧಾರಿಸುತ್ತದೆ. ಮಣ್ಣಿನ ಗಾಳಿಯನ್ನು ಸುಧಾರಿಸುವುದರಿಂದ ಸೂಕ್ಷ್ಮಜೀವಿಗಳ ಉತ್ಪತ್ತಿಯು ಹೆಚ್ಚಾಗಿ ಸಾವಯವ ಗೊಬ್ಬರಗಳು ಕರಗಿ ಪೋಷಕಾಂಶಗಳ ಲಭ್ಯತೆಯು ಹೆಚ್ಚುತ್ತದೆ ಎಂದಿದ್ದಾರೆ.

ಮಳೆಯನ್ನು ಹೀರಿಕೊಳ್ಳುವ ಮಣ್ಣಿನ ಸಾಮರ್ಥ್ಯವು ಬೆಳೆದಂತೆ ವಾತಾವರಣದಲ್ಲಿ ಲಭ್ಯವಿರುವ ಸಾರಜನಕ ನೀರಿನಲ್ಲಿ ಕರಗಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ. ಮಣ್ಣಿನಡಿಯಲ್ಲಿ ಅಡಗಿರುವ ಅನೇಕ ಕೀಟಗಳ ಮೊಟ್ಟೆ, ಮರಿಹುಳು ಮತ್ತು ಕೋಶಗಳು ಸೂರ್ಯನ ಅತಿಯಾದ ಬಿಸಿಲಿನ ಶಾಖದಿಂದ ಸತ್ತುಹೋಗಿ ಮುಂದಿನ ಬೆಳೆಗಳ ಮೇಲೆ ಕೀಟಗಳ ಅಪಾಯದ ಪ್ರಮಾಣ ವನ್ನು ಕಡಿಮೆ ಮಾಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಿಸಿಲಿನ ಶಾಖಕ್ಕೆ ಅನೇಕ ಬ್ಯಾಕ್ಟೀರಿಯಾ ಬೀಜಕಗಳು, ಶಿಲೀಂದ್ರಗಳು ಮತ್ತು ಸೂಕ್ಷ್ಮಜೀವಿಗಳು ಸಾಯುತ್ತವೆ, ಇದರಿಂದ ಮುಂದಿನ ಬೆಳೆಗಳಿಗೆ ಉಂಟಾಗುವ ರೋಗಗಳನ್ನು ತಪ್ಪಿಸಿ ಕೀಟ ಮತ್ತು ರೋಗನಾಶಕಗಳಿಗೆ ತಗಲುವ ವೆಚ್ಚವನ್ನು ಉಳಿಸುತ್ತದೆ. ಮಾಗಿ ಉಳಿಮೆಯಿಂದ ನೆಮಟೋಡ್ ಬಾಧೆಯನ್ನು ತಪ್ಪಿಸಬಹುದು. ಮಾಗಿ ಉಳುಮೆಯು ಕಳೆಗಳು ಮೊಳಕೆಯೊಡೆಯುವುದನ್ನು ತಡೆಯುತ್ತದೆ ಇದರಿಂದ ಕಳೆಗಳ ನಿಯಂತ್ರಣವನ್ನು ಮಾಡಬಹುದು.

ಮಾಗಿ ಉಳುಮೆಯಿಂದ ಹೆಚ್ಚಿನ ಮಳೆ ನೀರು ಸಂಗ್ರಹಣೆ, ಪೋಷಕಾಂಶಗಳ ಸಮತೋಲನ ಮತ್ತು ಮಣ್ಣಿನ ಗುಣಧರ್ಮಗಳ ಸುಧಾರಣೆಯಿಂದ ಹೆಚ್ಚಿನ ಬೆಳೆ ಇಳುವರಿ ಪಡೆಯಲು ಸಾಧ್ಯವಾಗುತ್ತದೆ.

ಹಾಗಾಗಿ ರೈತ ಬಾಂಧವರು ಮಾಗಿ ಉಳುಮೆಯ ಈ ಎಲ್ಲಾ ಪ್ರಯೋಜನೆಗಳಿಂದ ಕಡಿಮೆ ಖರ್ಚು ಮಾಡಿ ಹೆಚ್ಚಿನ ಇಳುವರಿ ಪಡೆದುಕೊಂಡು ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸಕೊಳ್ಳಬಹುದು ಎಂದು ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಲ್ಪಸಂಖ್ಯಾತರ ಮೊರಾರ್ಜಿ ಶಾಲೆಗಳಲ್ಲಿ ಅತಿಥಿ ಶಿಕ್ಷಕರು, ಉಪನ್ಯಾಸಕರಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2025–26 ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಪದವಿ ಪೂರ್ವ ಕಾಲೇಜು ಹಾಗೂ ಮೌಲನಾ ಆಜಾದ್ ಮಾದರಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜಿಗೆ ಅತಿಥಿ ಶಿಕ್ಷಕರು ಮತ್ತು ಅತಿಥಿ ಉಪನ್ಯಾಸಕರ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ಖಾಲಿ ಇರುವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಹುದ್ದೆಗೆ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳು ಬಿಎಸ್ಸಿ, ಬಿಎಡ್, ಮತ್ತು ಎಂಎ, ಬಿಎಡ್, ಎಂಸ್ಸಿ ಮತ್ತು ಬಿ.ಎಡ್ ವಿದ್ಯಾರ್ಹತೆ ಹೊಂದಿರಬೇಕು. ಮೇ.19 ರೊಳಗೆ ಅರ್ಜಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಎಸ್. ಎಮ್.ಎಸ್.ಕೆ ಪ್ಲಾಜಾ, ಗುಗ್ರೀ ನರ್ಸಿಂಗ್ ಹೋಮ್ ಪಕ್ಕದಲ್ಲಿ ಅಂಬೇಡ್ಕರ್ ಸರ್ಕಲ್ ಹತ್ತಿರ ಹೊಸಪೇಟೆ. ಕಚೇರಿ ದೂ.08394–200206, ಸಹಾಯವಾಣಿ ಕೇಂದ್ರ – 8277799990 ತಾಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳು, ಬಳ್ಳಾರಿ ಮೊ.9611342523, ಹೊಸಪೇಟೆ ತಾಲೂಕು ಮಾಹಿತಿ ಕೇಂದ್ರ ಮೊ.8073250473 ಹರಪನಹಳ್ಳಿ ಮೊ.7676621339 ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ
9448633038, Email:hampitimes@gmail.com

## ಮೈಕ್ರೋ ನ್ಯೂಸ್

### ಮೇ 15 ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಕಂಪ್ಲಿ**

ಕಂಪ್ಲಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪವಿಭಾಗ ವ್ಯಾಪ್ತಿಯ 110/11ಕೆವಿಯ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿರುವುರಿಂದ ಮೇ 15 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:*

ಕಂಪ್ಲಿ ಪಟ್ಟಣ, ರಾಮಸಾಗರ, ನಂ–10 ಮುದ್ದಾಪುರ, ಕಣಿವೆ ತಿಮ್ಮಾಪುರ, ದೇವಸಮುದ್ರ, ಹಂಪಾದೇವನಹ್ಳಿಯ ಎಫ್–6 ವಿದ್ಯಾಪೀಠ ಮಾರ್ಗ ಸೇರಿದಂತೆ ಇನ್ನೂ ಮುಂತಾದ ಪ್ರದೇಶಗಳು ಮತ್ತು ಕಂಪ್ಲಿ ಪಟ್ಟಣ ವ್ಯಾಪ್ತಿಯ ಐಪಿ ಸೆಟ್ ಎಫ್–10 ಮಾರ್ಗದ ಕೆ.ಎನ್ ಕ್ಯಾಂಪ್, ಎಫ್–5 ಮಾರ್ಗದ ಜಾನೂರು, ಎಫ್–7 ಮಾರ್ಗದ ಸಣಾಪುರ, ಎಫ್–8 ಮಾರ್ಗದ ಕಣಿವೆ ತಿಮ್ಮಾಪುರ, ಎಫ್–9 ಮಾರ್ಗದ ಮುಷ್ಟುರ್‌ಘಾಟ್ ಪ್ರದೇಶಗಳಲ್ಲಿ ಬೆಳಿಗ್ಗೆ 04 ಗಂಟೆಯಿಂದ ವಿದ್ಯುತ್ ಸರಬರಾಜು ಮಾಡಲಾಗುವುದು. ಹಾಗಾಗಿ ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕು ಎಂದು ಕಂಪ್ಲಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ತಿಳಿಸಿದ್ದಾರೆ.

### ಮೇ 14 ಕುಷ್ಟಗಿಯಲ್ಲಿ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಲೋಕಾಯುಕ್ತ ಅಧಿಕಾರಿಗಳಿಂದ ಕುಷ್ಟಗಿ ತಾಲ್ಲೂಕಿನಲ್ಲಿ ಮೇ 14 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕುಷ್ಟಗಿ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಸ್ಥಳದಲ್ಲಿಯೇ ದೂರು ಅರ್ಜಿಯ ಫಾರಂ ನಂ: 1 & 2 ತೆಗೆದುಕೊಂಡು ದೂರು ನೀಡಲು ಅನುಕೂಲ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9364062699, 9364062700, 9364062701, 9364062702 ಹಾಗೂ 9364062703 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಕೊಪ್ಪಳ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಥೋತ್ಸವಕ್ಕೆ ಕೋಳಿ ತೂರಿ ಭಕ್ತಿ ಸಮರ್ಪಣೆ



**ಹಂಪಿ ಟೈಮ್ಸ್ ಕೊಟ್ಟೂರು**

ವಿಶಿಷ್ಟಾಚರಣೆ ಹೊಂದಿರುವ ಬಿಕ್ಕಿ ಮರಡಿ ದುರ್ಗಮ್ಮ ದೇವಿಯ ರಥೋತ್ಸವವು ಬೌದ್ಧ ಪೂರ್ಣಿಮೆಯ ದಿನದಂದು ಸೋಮವಾರ ಸಂಜೆ 6.15ರ ವೇಳೆಗೆ ಸಾವಿರಾರು ಭಕ್ತಸ್ತೋಮದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವ ಚಾಲನೆ ಪಡೆಯುತ್ತಿದ್ದಂತೆ ದುರ್ಗಮ್ಮದೇವಿಗೆ ಹರಕೆ ಹೊತ್ತ ಭಕ್ತರು ಜೀವಂತ ಕೋಳಿಗಳನ್ನು ತೂರಿ ತಮ್ಮ ಭಕ್ತಿ ಸಮರ್ಪಿಸಿದರು, ಉಳಿದ ಭಕ್ತರು ಬಾಳೆ ಹಣ್ಣು ಎಸೆದು ದೇವಿಗೆ ನಮಸ್ಕರಿಸಿದರು. ಜೀವಂತ ಕೋಳಿಗಳನ್ನು ತೂರುವ ಏಕೈಕ ಸಂಪ್ರದಾಯ ಕೊಟ್ಟೂರಿನ ಬಿಕ್ಕಿಮರಡಿ ದುರ್ಗಮ್ಮ ದೇವಿಯ ರಥೋತ್ಸವ ದ್ದಾಗಿದ್ದು, ಇದನ್ನು ಕಣ್ತುಂಬಿಕೊಳ್ಳಲು ಭಕ್ತರ ದಂಡು ಮಧ್ಯಾಹ್ನ 3 ರಿಂದಲೇ ಕೆರೆ ದಂಡೆಯ ಮೇಲೆರುವ ಮರಡಿಮೇಲೆಜಮಾವಣೆಗೊಂಡಿತ್ತು.

ದುರ್ಗಮ್ಮ ದೇವಿಯ ರಥದ ಕಳಶ ವೀಕ್ಷಿಸಲು ಇಲ್ಲಿನ ಹತ್ತಾರು ಹಳ್ಳಿಯಿಂದ ನೂರಾರು ನವಜೋಡಿಗಳು ಆಗಮಿಸಿದ್ದು, ಇಲ್ಲಿನ ಮತ್ತೊಂದು ವಿಶೇಷತೆಯಾಗಿ ಗೋಚರಿಸಿತು.

ರಥೋತ್ಸವಕ್ಕೂ ಮುನ್ನ ದುರ್ಗಮ್ಮದೇವಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಮಂಗಳ ವಾದ್ಯಗಳೊಂದಿಗೆ ದೇವಿಯ ಪಲ್ಲಕ್ಕಿ ಉತ್ಸವವನ್ನು ತಂದು ರಥದ ಸುತ್ತ ಪ್ರದಕ್ಷಿಣೆ ಹಾಕಿ ರಥದಲ್ಲಿ ಪ್ರತಿಷ್ಠಾಪಿಸಿದರು.ನಂತರ ದೇವಿಯ ಪಟಾಕ್ಷಿ ಸವಾಲು ಪ್ರಕ್ರಿಯೆ ನಡೆಯಿತು.

ಸವಾಲು ಪ್ರಕ್ರಿಯೆಯಲ್ಲಿ ಪಟ್ಟಣದ ರಾಂಪುರ ಹರೀಶ 55101 ರೂ.ಗೆ ಪಟಾಕ್ಷಿಯನ್ನು ತಮ್ಮದಾಗಿಸಿಕೊಂಡರು. ಮರಡಿ ಮೇಲಿರುವ ಶ್ರೀ ಆಂಜನೇಯ ದೇವಸ್ಥಾನದ ಪಾದಗಟ್ಟೆವರೆಗೆ ಸಾಗಿ ಮತ್ತೆ ಮರಳಿ ತೇರು ಮೂಲಸ್ಥಾನಕ್ಕೆ ಬಂದು ನೆಲೆ ನಿಂತಿತು.

ಪ್ರಸ್ತುತ ವರ್ಷ ಮಳೆ ಆರ್ಭಟ ಇಲ್ಲದ ಕಾರಣ ರಥೋತ್ಸವಕ್ಕೆ ಆಗಮಿಸಿದ ನವ ಜೋಡಿಗಳು ಹಾಗೂ ಭಕ್ತಾದಿಗಳು ವಿಶಾಲವಾದ ಮರಡಿ ಮೇಲೆ ಕುಳಿತು ಮಂಡಕ್ಕಿ ಮಿರ್ಚಿ ಸವಿಯುತ್ತ ಕತ್ತಲಾಗುವವರೆಗೆ ದೇವಸ್ಥಾನ ಮತ್ತು ಕೆರೆ ಬಳಿ ಪರಿಶುದ್ಧ ಗಾಳಿ ಸ್ವೀಕರಿಸುತ್ತ ಸಂಭ್ರಮಿಸಿದರು.

